ಕನ್ನಡಪ್ರಭ
ಶನಿವಾರ 9.05.2026

ಗರಿಷ್ಠ 37°C | ಕನಿಷ್ಠ 23°C

ಸುದ್ದಿ ಸಿಂಚನ

ಸಾಕು ನಾಯಿ ಸಾವು: ವೃದ್ಧ ದಂಪತಿ ಮೇಲೆ ಹಲ್ಲೆ

ಬೆಳಗಾವಿ: ಸಾಕು ನಾಯಿಯ ಸಾವು ವಿಚಾರಕ್ಕೆ ವೃದ್ಧ ದಂಪತಿ ಮೇಲೆ ಹಲ್ಲೆ ನಡೆಸಿದ ಘಟನೆ ನಗರದ ಕಲ್ಮೇಶ್ವರ ನಗರದಲ್ಲಿ ನಡೆದಿದೆ. ಗಾಯಯಗೊಂಡ ದಂಪತಿ ನ್ಯಾಯಕ್ಕಾಗಿ ಪೊಲೀಸ್ ಆಯುಕ್ತರ ಕಚೇರಿ ಮೆಟ್ಟಿಲೇರಿದ್ದಾರೆ. ಶಾಂತಾ ರಜಾಯಿ, ಭೈರು ರಜಾಯಿ ದಂಪತಿ ಮೇಲೆ ಪಕ್ಕದ ಸುಗಂಧ ಲಾಡ್, ಅವರ ಪುತ್ರ ನಂದು ಲಾಡ್ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ಸಾಕು ನಾಯಿ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ನಾಯಿಯನ್ನು ನೀವೇ ಕೊಂದಿದ್ದೀರಾ ಎಂದು ಆರೋಪಿಸಿ ಜಗಳ ತೆಗೆದು ಬಳಿಕ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಹಲ್ಲೆ ವೇಳೆ ಶಾಂತಾ ರಜಾಯಿ ಕೈಮುರಿದಿದೆ. ಭೈರು ರಜಾಯಿ ತಲೆಗೆ ಪೆಟ್ಟು ಬಿದ್ದಿದೆ. ಅವರನ್ನು ಬಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆಸ್ಪತ್ರೆಯಲ್ಲಿ ಇಬ್ಬರಿಗೂ ಚಿಕಿತ್ಸೆ ಮುಂದುವರಿದಿದೆ. ಈ ಕುರಿತು ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಯಾಗಿ ಬಸವರಾಜ ಕುರಿಹುಲಿ

ಬೆಳಗಾವಿ : ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಯಾಗಿ ಬಸವರಾಜ.ವೈ.ಕುರಿಹುಲಿ ಕರ್ತವ್ಯ ಪ್ರಭಾರ ಅಧಿಕಾರವನ್ನು ಸ್ವೀಕರಿಸಿದರು.



ಈ ಹುದ್ದೆಗೆ ಸಂಬಂಧಿಸಿದ ಸರ್ಕಾರಿ, ಅರೆ ಸರ್ಕಾರಿ ಪತ್ರವ್ಯವಹಾರಗಳನ್ನು ಇನ್ನು ಮುಂದೆ ಬಸವರಾಜ ಕುರಿಹುಲಿ ಹೆಸರಿನಲ್ಲಿ ನಡೆಸುವಂತೆ ತಿಳಿಸಲಾಗಿದೆ. ಕಚೇರಿ ವಿಳಾಸ: ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ, ಸುವರ್ಣ ವಿಧಾನಸೌಧ, 2ನೇ ಮಹಡಿ, ಕೊಠಡಿ ಸಂಖ್ಯೆ 204, 205 ಮತ್ತು 206, ಹಲಗಾ, ಬೆಳಗಾವಿ. ದೂ.0831-2407247, ಮೊಬೈಲ್: 9739239274, ಇ-ಮೇಲ್: jobcmbelgavi@gmail.com ಸಂಬಂಧಿತ ಇಲಾಖೆಗಳು ಹಾಗೂ ಸಾರ್ವಜನಿಕರು ಮೇಲ್ಕಂಡ ವಿಳಾಸದ ಮೂಲಕ ನಡೆಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂದಿನಿಂದ ಬೆಟಗೇರಿ ಬೀರಸಿದ್ದೇಶ್ವರ ಜಾತ್ರೆ

ಗೋಕಾಕ: ತಾಲೂಕಿನ ಬೆಟಗೇರಿಯ ಬೀರಸಿದ್ದೇಶ್ವರ ಜಾತ್ರಾ ಮಹೋತ್ಸವ ಹಾಗೂ ದಾನಿಗಳಿಗೆ ಸತ್ಕಾರ



ಸಮಾರಂಭ ಮೇ.9ರಿಂದ ಮೇ.11ರವರೆಗೆ ನಡೆಯಲಿದೆ. ಮೇ.9ರಂದು ಬೆಳಗ್ಗೆ 8ಗಂಟೆಗೆ ಬೀರಸಿದ್ದೇಶ್ವರ ದೇವರ ಗದ್ದುಗೆ ಮಹಾಪೂಜೆ, ವಿವಿಧ ಧಾರ್ಮಿಕ ಕಾರ್ಯಕ್ರಮ. ಸಂಜೆ 5ಕ್ಕೆ ಪುರದೇವರ ಹಾಗೂ ಪರಸ್ಥಳದ ವಿವಿಧ ದೇವರ ವಾಲಗ ಕೂಡುವ ಕಾರ್ಯಕ್ರಮ. ಮಮದಾಪುರ ಮತ್ತು ಗೋಸಬಾಳದ ಬೀರಸಿದ್ದೇಶ್ವರ ಪಲ್ಲಕ್ಕಿ, ಮುಗಳಿಹಾಳದ ಮಾಳಿಂಗರಾಯ ದೇವರ ಪಲ್ಲಕ್ಕಿ ಬರಮಾಡಿಕೊಳ್ಳುವ ಕಾರ್ಯಕ್ರಮ. ಮೇ.10ರ ಬೆಳಗ್ಗೆ 6ಕ್ಕೆ ಬೀರಸಿದ್ದೇಶ್ವರ ದೇವರ ಗದ್ದುಗೆ ಮಹಾಪೂಜೆ, ಬೆಳಗ್ಗೆ 7ಕ್ಕೆ ಪಲ್ಲಕ್ಕಿ ಉತ್ಸವ. ಸುಣಧೋಳಿಯ ಅಭಿನವ ಶಿವಾನಂದ ಸ್ವಾಮಿಜಿ ಸಾನಿಧ್ಯ, ಮಮದಾಪೂರದ ಮೌನ ಮಲ್ಲಿಕಾರ್ಜುನ ಸ್ವಾಮಿಜಿ ನೇತೃತ್ವ ವಹಿಸಲಿದ್ದರೆ.

ಜಲಾಶಯ ಮಟ್ಟ

ಘಟಪ್ರಭಾ
- ಗರಿಷ್ಠ ಮಟ್ಟ..................2175.00ಮೀ.
- ಇಂದಿನ ಮಟ್ಟ.............2110.783ಮೀ.
- ಒಳಹರಿವು.......................ಇಲ್ಲ
- ಹೊರಹರಿವು....................143 ಕ್ಯು

ಮಲಪ್ರಭಾ
- ಗರಿಷ್ಠ ಮಟ್ಟ..................2079.50ಅಡಿ
- ಇಂದಿನ ಮಟ್ಟ................2050.55ಅಡಿ
- ಒಳಹರಿವು..............................ಇಲ್ಲ
- ಹೊರಹರಿವು...................194ಕ್ಯು



ಗೋಕಾಕ ನಗರದ ಸಿದ್ದಲಿಂಗೇಶ್ವರ ಬಿಸಿಎ ಮಹಾವಿದ್ಯಾಲಯದಲ್ಲಿ ನಡೆದ ಬಿಸಿಎ ವಿದ್ಯಾರ್ಥಿಗಳ ಬಿಳ್ಕೊಡುಗೆ ಕಾರ್ಯಕ್ರಮವನ್ನು ಕಾರಾಗೃಹದ ಜೈಲರ್ ಸುಷ್ಮಾ ಒಡಗೇರಿ ಉದ್ಘಾಟಿಸಿದರು. ವೇದಿಕೆಯಲ್ಲಿ ಆಡಳಿತಾಧಿಕಾರಿ ಅಡಿವೇಶ ಗವಿಮಠ, ಅರ್ಪನಾ ಕುಲಕರ್ಣಿ, ಅರ್ಬನ್ ಬ್ಯಾಂಕ್ ನಿರ್ದೇಶಕ ಮಹಾಂತೇಶ ಕಲ್ಲೋಳಿ, ಪ್ರವಿತ್ರಾ ಡಿಸೋಜಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಗೋಕಾಕದ ಶೂನ್ಯ ಸಂಪಾದನ ಮಠದಲ್ಲಿ ಬಸವೇಶ್ವರ ಧರ್ಮ ಪ್ರಚಾರಕ ಸಂಸ್ಥೆ, ವಚನ ಸಾಹಿತ್ಯ ಚಿಂತನ ಮಂಥನ ವೇದಿಕೆ ಹಾಗೂ ಲಿಂಗಾಯತ ಮಹಿಳಾ ವೇದಿಕೆಯಿಂದ ನಡೆದ 196ನೇ ಮಾಸಿಕ ಶಿವಾನುಭವಗೋಷ್ಠಿಯಲ್ಲಿ ಪೀಠಾಧಿಪತಿ ಮುರುಘರಾಜೇಂದ್ರ ಸ್ವಾಮೀಜಿ ಮಾತನಾಡಿದರು. ಇಂಗಳಗಾವಿಯ ಗುರುಲಿಂಗ ದೇವರ ಮಠದ ಸಿದ್ದಲಿಂಗ ಸ್ವಾಮೀಜಿ, ಬಸನಗೌಡ ಪಾಟೀಲ ಇದ್ದರು.



ಆರೋಗ್ಯ ಉಚಿತ ತಪಾಸಣೆ ಶಿಬಿರ

ಯಮಕನಮರಡಿ: ಕ್ಯಾನ್ಸರ್‌ನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿ ಚಿಕಿತ್ಸೆ ನೀಡಿದರೆ ಕ್ಯಾನ್ಸರ್‌ನಿಂದ ಗುಣಮುಖವಾಗಬಹುದು ಎಂದು ಪಾಶ್ಚಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಶಶಾಂಕ್ ಪಾಟೀಲ್ ತಿಳಿಸಿದರು. ಹಿಂಡಾಲ್ಕೋ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಹಾಗೂ ಮಹಿಳಾ ಕಲ್ಯಾಣ ಸಂಸ್ಥೆ ಬೆಳಗಾವಿ ಸಂಯುಕ್ತ ಆಶ್ರಯದಲ್ಲಿ ಕೆಎಲ್‌ಇ ಸಂಸ್ಥೆಯ ಸಂಪತ್ ಕುಮಾರ್‌ಶಿವಣಗಿ ಕ್ಯಾನ್ಸರ್ ಆಸ್ಪತ್ರೆಯ ಸಹಕಾರದಲ್ಲಿ ಪಾಶ್ಚಾಪುರದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದರು. ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಸಂತಾನಿ ದಂಡಿನ, ಕೆಎಲ್‌ಇ ಆಸ್ಪತ್ರೆ ವೈದ್ಯ ಡಾ.ಶ್ರೀಧರ, ಡಾ.ಶೃತಿ ಹಾಗೂ ನುರಿತ ತಜ್ಞರು ತಪಾಸಣೆ ನಡೆಸಿದರು.

ಜೈನ ಧರ್ಮದ ಸಿದ್ಧಾಂತ, ತತ್ವಗಳು ಪ್ರಪಂಚಕ್ಕೆ ಮಾದರಿ

ಪದ್ಮಾವತಿ ಮಂದಿರಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಶಾಸಕ ಲಕ್ಷ್ಮಣ

• **ಕನ್ನಡಪ್ರಭ ವಾರ್ತೆ** ಕಾಗವಾಡ

ಜೈನ ಧರ್ಮದ ತತ್ವ ಹಾಗೂ ಸಿದ್ಧಾಂತಗಳು ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲ. ಇಡೀ ಸಮಾಜಕ್ಕೆ ಅವಶ್ಯವಾಗಿದೆ. ಜೈನ ಧರ್ಮದ ಮುನಿಗಳು ಜೀವೋ ಔರ ಜೀನೇ ದೋ ಎಂಬ ಸಂದೇಶ ನೀಡಿದ್ದು ಇಡೀ ಜಗತ್ತಿಗೆ ಮಾದರಿಯಾಗಿದೆ ಎಂದು ಅಥಣಿ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಕಾಗವಾಡ ತಾಲೂಕಿನ ಉಗಾರ ಬುದುಕ್ ಗ್ರಾಮದ ಪದ್ಮಾವತಿ ಮಂದಿರಲ್ಲಿ ನಿರ್ಮಿಸಿದ್ದ ಯಾತ್ರಿ ನಿವಾಸ, ಭೋಜನ ಶಾಲೆ ಹಾಗೂ ಸಭಾ ಭವನದ ಉದ್ಘಾಟನೆಯ ನಿಮಿತ್ಯ ಏರ್ಪಡಿಸಿದ ಐದು ದಿನಗಳ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಜೈನ ಧರ್ಮ ಹಲವಾರು ತತ್ವಾದರ್ಶಗಳನ್ನು ಪಾಲಿಸಿಕೊಂಡು ಬರುತ್ತಿದ್ದು, ಈ ಭೂಮಿಯ ಮೇಲೆ ಜನ್ಮ ತಾಳಿದ ಪ್ರತಿಯೊಂದು ಜೀವಿಯೂ ತಾನು ಬದುಕಬೇಕು, ಇತರರಿಗೂ ಬದುಕಲು ಅವಕಾಶ ಮಾಡಿಕೊಡಬೇಕು ಎಂಬ ಜೈನ ಧರ್ಮದ ತತ್ವ ಇಡೀ ವಿಶ್ವಕ್ಕೆ ಮಾದರಿಯಾಗಿದ್ದು, ಇದು ಕೇಲವ ಜೈನ ಧರ್ಮಕ್ಕೆ ಮಾತ್ರ ಸೀಮಿತವಾಗದೇ ಎಲ್ಲಾ ಧರ್ಮಗಳಿಗೂ ಅನ್ವಯಿಸುತ್ತದೆ ಎಂದು ಹೇಳಿದರು.

ನಮ್ಮ ದೇಶದಲ್ಲಿ ಧರ್ಮಕ್ಕೆ ಪುರಾತನ ಇತಿಹಾಸವಿದ್ದು, ನಾವೆಲ್ಲರೂ ಜೈನ ಧರ್ಮವನ್ನು ಗೌರವಿಸಬೇಕು. ಜೈನ ಧರ್ಮದವರು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ್ದು, ಸರ್ಕಾರದಿಂದ ಅನೇಕ ಸೌಲಭ್ಯಗಳು ದೊರೆಯುತ್ತವೆ. ಇದರ ಉಪಯೋಗ ಪಡೆದುಕೊಳ್ಳಬೇಕೆಂದು ಲಕ್ಷ್ಮಣ ಸವದಿ ಕಿವಿಮಾತು ಹೇಳಿದರು.

ಪದ್ಮಾವತಿ ಮಂದಿರದ ಧರ್ಮದರ್ಶಿಗಳಾದ ಶೀತಲಗೌಡ ಪಾಟೀಲ ಮಾತನಾಡಿ, ಉಗಾರ ಪದ್ಮಾವತಿ ಮಂದಿರವು ಸುಮಾರು 400 ವರ್ಷಗಳ ಇತಿಹಾಸವನ್ನು ಹೊಂದಿದೆ. ಇಲ್ಲಿಗೆ ಜೈನ ಸೇರಿದಂತೆ ಹಲವಾರು



ಧರ್ಮಿಯರು ನಡೆದುಕೊಳ್ಳುತ್ತಾರೆ. ಈ ದೇವಿಯ ಮುಂದೆ ಭಕ್ತರು ತಮ್ಮ ಇಷ್ಟಾರ್ಥಗಳನ್ನು ಇಡೇರಿಸುವಂತೆ ಬೇಡಿಕೊಂಡರೆ ಖಂಡಿತವಾಗಿಯೂ ಇಡೇರುತ್ತದೆ. ಶಾಸಕ ಲಕ್ಷ್ಮಣ ಸವದಿಯವರು ಈ ಕ್ಷೇತ್ರವನ್ನು ನೋಡಿ ತಾವಾಗಿಯೇ ₹ 5 ಲಕ್ಷ ದೇಣಿಗೆ ಘೋಷಿಸಿರುವುದು ಸಂತಸ ತಂದಿದೆ ಎಂದರು.

ಈ ವೇಳೆ ಮಂದಿರದ ವತಿಯಿಂದ ಅಥಣಿ ಶಾಸಕ ಲಕ್ಷ್ಮಣ ಸವದಿ, ಮಹಾರಾಷ್ಟ್ರದ ಮಾಜಿ ಸಚಿವ ರಾಜೇಂದ್ರ ಪಾಟೀಲ(ಯಡ್ರಾಂಕರ), ಪುರಸಭಾ ಸದಸ್ಯ ರಾಜು ಗುಡೋಡಗಿ ಅವರನ್ನು ಶೀತಲಗೌಡ ಪಾಟೀಲ, ವೃಷಭ ಪಾಟೀಲ, ಅಣ್ಣಾಗೌಡ ಪಾಟೀಲ ಹಾಗೂ ಮತ್ತಿತರರು ಸನ್ಮಾನಿಸಿದರು. ಈ ವೇಳೆ ಅಣ್ಣಾಸಾಬ ನಂದಗಾಂವ, ವಜ್ರಕುಮಾರ ಮಗದುಮ್, ಆದೇಶ ವಸವಾಡೆ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

> **ಜೈನ ಧರ್ಮದ ಆಚಾರ-ವಿಚಾರಗಳಲ್ಲಿ ಇಂದು ಕೂಡ ಯಾವುದೇ ಬದಲಾವಣೆ ಆಗಿಲ್ಲ. ಬದುಕುವ ಹಕ್ಕು ಎಲ್ಲಾ ಜೀವಿಗಳಿಗೂ ಸಮಾನವಾಗಿಯೇ ಇದೆ. ತಾವೂ ಬದುಕಿ ಇತರ ಜೀವಿಗಳಿಗೂ ಸಮಾನ ಅವಕಾಶ ನೀಡುವ ಜೈನ ಧರ್ಮ ಶ್ರೇಷ್ಠ ಧರ್ಮವಾಗಿದೆ. ಭಗವಾನ ಮಹಾವೀರ ಬೋಧಿಸಿದ ತತ್ವಗಳು ವಿಶ್ವಮಾನ್ಯವಾಗಿದ್ದು, ಸಾರ್ವಕಾಲಿಕ ಮೌಲ್ಯ ಹೊಂದಿದೆ.**
>
> • **ಲಕ್ಷ್ಮಣ ಸವದಿ** ಅಥಣಿ ಶಾಸಕ

ಸಹಕಾರ ಸಂಘಗಳ ಅಭಿವೃದ್ಧಿಗೆ ಹೊಣೆಗಾರಿಕೆ ಮುಖ್ಯ: ಜಿಂಡ್ರಾಳಿ



• **ಕನ್ನಡಪ್ರಭ ವಾರ್ತೆ** ಯಮಕನಮರಡಿ

ಸಂಘ ಸಂಸ್ಥೆಗಳನ್ನು ಕಟ್ಟುವುದು ಮುಖ್ಯವಲ್ಲ ಅವುಗಳನ್ನು ಉಳಿಸಿ ಬೆಳಸಿ ಮುಂದುವರಿಸಿಕೊಂಡು ಹೋಗುವುದು ಎಲ್ಲರ ಹೊಣೆಯಾಗಿದೆ ಎಂದು ಯಮಕನಮರಡಿ ಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘದ ಸಂಸ್ಥಾಪಕ ರವಿ ಜಿಂಡ್ರಾಳಿ ಹೇಳಿದರು.

ಮಸರಗುಪ್ಪಿ ಗ್ರಾಮದಲ್ಲಿ ನಡೆದ ಮಸರಗುಪ್ಪಿ ಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘ ಉದ್ಘಾಟಿಸಿ ಮಾತನಾಡಿ, ಸಸಿಗೆ ನೀರುಣಿಸುವ ಶಕ್ತಿ ತುಂಬಿದಾಗ ಮರವಾಗಿ ಬೆಳೆದು ಜನರಿಗೆ ನೆರಳನ್ನು ನೀಡುತ್ತದೆ. ಅದರಂತೆ ಸಂಘದ ಆಡಳಿತ ಮಂಡಳಿ ನಿಸ್ವಾರ್ಥಸೇವೆ ಸಿಬ್ಬಂದಿಯ ಪ್ರಾಮಾಣಿಕತೆ ಮತ್ತು ಗ್ರಾಹಕರ ವಿಶ್ವಾಸವೇ ಸಂಘಗಳು ಪ್ರಗತಿ ಯಾಗುತ್ತವೆ ಎಂದು ರವಿ ಜಿಂಡ್ರಾಳಿ ಹೇಳಿದರು.

ಕ್ಯಾರಗುಡ್ಡದ ಅವುಜೇಕರ ಆಶ್ರಮದ ಅಭಿನವ ಮಂಜುನಾಥ ಮಹಾಸ್ವಾಮಿಗಳು ಮಾತನಾಡಿ, ಸಹಕಾರಿ ಸಂಘ ಸಂಸ್ಥೆಗಳು ಗ್ರಾಮೀಣ ಭಾಗದ ಜನರಿಗೆ ರಾಷ್ಟ್ರೀಕೃತ ಬ್ಯಾಂಕುಗಳಿಗಿಂತ ಸುಲಭವಾಗಿ ಸಾಲ ನೀಡುತ್ತವೆ. ಇದರಿಂದ ಗ್ರಾಮೀಣ ಭಾಗದ ಜನರು ಆರ್ಥಿವಾಗಿ ಬೆಳೆಯಲು ಅನುಕೂಲವಾಗುತ್ತದೆ. ಸಂಘ ಸಂಸ್ಥೆಗಳು ನಮ್ಮದು ಎಂದು ತಿಳಿದುಕೊಂಡು ನಿಸ್ವಾರ್ಥದಿಂದ ಕೆಲಸ ಮಾಡಿದ್ದಲ್ಲಿ ಸಂಘ ಸಂಸ್ಥೆಗಳು ಪ್ರಗತಿಯತ್ತ ಸಾಗುತ್ತವೆ. ಸ್ವಾರ್ಥ ಇದ್ದರೆ ಅದು ಶವದ ಪೆಟ್ಟಿಗೆ ಇದ್ದಂತೆ ಜಾತಿ, ಧರ್ಮ, ಪಂಥ ಎನ್ನದೆ ಎಲ್ಲರನ್ನು ಒಗ್ಗೂಡಿಸಿಕೊಂಡು ಸಂಸ್ಥೆಗಳನ್ನು ಬೆಳಸಬೇಕು ಎಂದು ಕಿವಿಮಾತು ಹೇಳಿದರು. ಆಲಮಖಾನ ದೇಸಾಯಿ ಮಾತನಾಡಿದರು. ಸಂಘದ ಸಂಸ್ಥಾಪಕ ಅಧ್ಯಕ್ಷ ಸಂಜಯ ಕಂಠಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ವೇಳೆ ಸಂಘದ ಉಪಾಧ್ಯಕ್ಷ ಇಮ್ತಿಯಾಜಬೇಗ ಇನಾಮದಾರ, ಸದಸ್ಯರಾದ ಕಲಗೌಡ ಪಾಟೀಲ, ದುಂಡಗೌಡ ಪಾಟೀಲ, ಅಶೋಕ ಕಡಲಗಿ, ದೇವರಾಜ ಹಣಗಂಡಿ, ಶಿವಾನಂದ ಪಾಟೀಲ, ದಾದಪ್ಪ ದಪ್ಪಾಧೂಳಿ, ಮೋಸಿನಬೇಗ ಇನಾಮದಾರ, ಅಬ್ಬಾಸ ಮುಲ್ತಾನಿ, ಅರುಣಾ ಕಂಠಿ, ಲಕ್ಷ್ಮೀ ಪಾಟೀಲ, ರೋಹಿತ ಚಲವಾದಿ, ಸಂತೋಷ ಗಸ್ತಿ, ಕಲ್ಲಪ್ಪ ಮಹಾದೇವ ಮರಡಿ, ಸಿಬ್ಬಂದಿಗಳಾದ ರಶ್ಮೀಕುಮಾರ ಮರೆನ್ನವರ, ಮಂಜುನಾಥ ಡೋನಿ, ಗ್ರಾಮಸ್ಥರು ಉಪಸ್ಥಿತಿರದ್ದರು. ಸಂತೋಷ ಪಾಟೀಲ ಸ್ವಾಗತಿಸಿ, ನಿರೂಪಿಸಿದರು.

ನಾಳೆ ಬೆಂಗಳೂರಿನಲ್ಲಿ ಕೆಎಲ್‌ಇ ಶಾಲೆಯ ನಾಮಕರಣ ಸಮಾರಂಭ

ಬೆಳಗಾವಿ: ಕೆಎಲ್‌ಇಸಂಸ್ಥೆಯಬೆಂಗಳೂರಿನ ರಾಜಾಜಿನಗರದ ಎಸ್.ನಿಜಲಿಂಗಪ್ಪಕಾಲೇಜು ಆವರಣದ ಕೆಎಲ್‌ಇಸಂಸ್ಥೆಯಸಿಬಿಎಸ್‌ಇ ಆಂಗ್ಲಮಾಧ್ಯಮ ಶಾಲೆಯ ನಾಮಕರಣ ಸಮಾರಂಭವು ಮೇ.10 ರಂದು ಸಂಜೆ 4 ಗಂಟೆಗೆ ಜರುಗಲಿದೆ.

ಮುಖ್ಯ ಅತಿಥಿಗಳಾಗಿ ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಸಚಿವ ಪ್ರಹ್ಲಾದ ಜೋಶಿ ಆಗಮಿಸಲಿದ್ದಾರೆ. ಗೌರವ ಅತಿಥಿಗಳಾಗಿ ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಹಾಗೂ ಬೆಳಗಾವಿ ಕೆಎಲ್‌ಇ ಕಾಹೆರ್‌ಹಾಗೂ ಹುಬ್ಬಳ್ಳಿ ಕೆಎಲ್‌ಇಟೆಕ್ ವಿವಿ ಕುಲಾಧಿಪತಿ ಡಾ.ಪ್ರಭಾಕರ ಕೋರೆ, ಮುಂಬಯಿ ಚಿತ್ರ ನಿರ್ಮಾಪಕಿ ಅರುಣಾರಾಜೆ ಪಾಟೀಲ ಆಗಮಿಸಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಕೆಎಲ್‌ಇ ಸಂಸ್ಥೆಯ ಅಧ್ಯಕ್ಷ ಮಹಾಂತೇಶ ಕೌಜಲಗಿ ವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಅಮೀತ ಕೋರೆ, ಕೆ.ಎಫ್.ಪಾಟೀಲ ಚಾರಿಟೇಬಲ್ ಟ್ರಸ್ಟ್ ಸದಸ್ಯರು ಉಪಸ್ಥಿತರಿರುವರು. ಮೇ.11 ರಂದು ನಿಗದಿಯಾಗಿದ್ದ ಈ ಸಮಾರಂಭವು ಮೇ 10 ರಂದು ಮರುನಿಗದಿಯಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಪಿಲನಾಥ ದೇಗುಲದ ಹೊಂಡಕ್ಕೆ ಪ್ರವೇಶ ನಿಷೇಧ

ಬೆಳಗಾವಿ: ನಗರದ ಕಪಿಲೇಶ್ವರ ದೇವಸ್ಥಾನದ ಹಿಂದಿರುವ ಕಪಿಲನಾಥ ಹೊಂಡವು ಆಳವಾದ ಮತ್ತು ಅಪಾಯಕಾರಿ ಸ್ವರೂಪ ಹೊಂದಿದ್ದು, ಇಲ್ಲಿ ಪದೇ ಪದೇ ದುರ್ಘಟನೆಗಳು ಸಂಭವಿಸುತ್ತಿದೆ. ಆದ್ದರಿಂದ ಮೇ.8 ರಿಂದ ಮುಂದಿನ ಆದೇಶದವರೆಗೆ ನಗರದ ಕಪಿಲೇಶ್ವರ ದೇವಸ್ಥಾನದ ಹಿಂದೆ ಇರುವ ಕಪಿಲನಾಥ ಹೊಂಡಕ್ಕೆ ಸಾರ್ವಜನಿಕ ಪ್ರವೇಶವನ್ನು ನಿಷೇಧಿಸಲಾಗಿದೆ. ಸದರಿ ಆಜ್ಞೆಯನ್ನು ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಪೊಲೀಸ್ ಆಯುಕ್ತರಾದ ಬೊರಸೆ ಭೂಷಣ್ ಗುಲಾಬರಾವ್ ನಿಷೇದಾಜ್ಞೆ ಜಾರಿಗೊಳಿಸಿ ಆದೇಶ ಹೊರಡಿಸಿದ್ದಾರೆ.

ನಕಾರಾತ್ಮಕ ಭಾವನೆಗಳು ಉಜ್ವಲ ಭವಿಷ್ಯಕ್ಕೆ ಅಡ್ಡಿ

ಆರ್‌ಸಿಯು ವಿವಿಯ ಮೌಲ್ಯಮಾಪನ ವಿಭಾಗದ ರಜಿಸ್ಟ್ರಾರ್‌ಡಾ.ದೊಡ್ಡನಗೌಡ ಪಾಟೀಲ

• **ಕನ್ನಡಪ್ರಭ ವಾರ್ತೆ** ಸಂಕೇಶ್ವರ

ತುಕ್ಕು ಹೇಗೆ ಕಬ್ಬಿಣವನ್ನು ನಾಶ ಮಾಡುತ್ತದೆಯೋ, ಹಾಗೇ ನನ್ನಿಂದ ಆಗುವುದಿಲ್ಲ ಎಂಬ ನಕಾರಾತ್ಮಕ ಮನೋಭಾವವೇ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ದೊಡ್ಡ ಅಡ್ಡಿಯಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಬದುಕಿನಲ್ಲಿ ಉನ್ನತಿಗೆ ಏರಬೇಕು ಎಂದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗದ ರಜಿಸ್ಟ್ರಾರ್ ಡಾ.ದೊಡ್ಡನಗೌಡ ಪಾಟೀಲ ಹೇಳಿದರು.

ಸಮೀಪದ ನಿಡಸೋಸಿ ಎಸ್‌ಜೆಪಿಎನ್ ಟ್ರಸ್ಟ್‌ನ ಕಂಪ್ಯೂಟರ್‌ಅಪ್ಲಿಕೇಷನ್, ವಾಣಿಜ್ಯ ಮತ್ತು ವಿಜ್ಞಾನ ಪದವಿ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ವಾರ್ಷಿಕೋತ್ಸವ ಹಾಗೂ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು. ಜೀವನ ಅತ್ಯಂತ ಅಮೂಲ್ಯವಾದದ್ದು, ಒಮ್ಮೆ ಕಳೆದು ಹೋದ ಸಮಯಮರಳಿಬರುವುದಿಲ್ಲ. ಹೀಗಾಗಿ, ವಿದ್ಯಾರ್ಥಿಗಳು



ಶ್ರದ್ಧೆ, ಪರಿಶ್ರಮ ಮತ್ತು ಗುರಿ ಸಾಧನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಯಮಕನಮರಡಿ ಹುಣಶಿಕೊಳ್ಳಮಠದ ಸಿದ್ದಬಸವ ದೇವರು ಆಶೀರ್ವಚನ ನೀಡಿ, ವಿದ್ಯಾವಂತಿಕೆ ಬೇರೆ, ಹೃದಯವಂತಿಕೆ ಬೇರೆ. ಇಂದಿನ ವಿದ್ಯಾರ್ಥಿಗಳು ಕೇವಲ ಶಿಕ್ಷಣ ಪಡೆದರೆ ಸಾಕಾಗುವುದಿಲ್ಲ, ಮಾನವೀಯ ಮೌಲ್ಯಗಳನ್ನೂ ಬೆಳೆಸಿಕೊಳ್ಳಬೇಕು. ವಿದ್ಯೆಯ ಜೊತೆಗೆ ಹೃದಯವೂ ದೊಡ್ಡದಾಗಲಿ ಎಂದು ಕಿವಿಮಾತು ಹೇಳಿದರು.

ಹಳೆಯ ವಿದ್ಯಾರ್ಥಿನಿ ಭೂಮಿಕಾ ಬೇಡಿಕಿಹಾಳ, ನಿವೃತ್ತ ಉಪನ್ಯಾಸಕ ಜಿ.ಬಿ.ಸಂಗೋಟಿ ಹಾಗೂ ಪ್ರಾಚಾರ್ಯ ಪ್ರೊ.ಆರ್.ಬಿ.ಉಮರಾಣಿ ಮಾತನಾಡಿದರು. ಪ್ರಾಚಾರ್ಯ ಬಸವರಾಜ ಹಾಲಬಾವಿ ಮಹಾವಿದ್ಯಾಲಯದ ವಾರ್ಷಿಕ ವರದಿ ವಾಚಿಸಿದರು. ಪ್ರೊ.ಸೋನಾಲಿ ಜಾಧವ ಮತ್ತು ಅಮೃತಾ ಹಿರೇಮಠ ನಿರೂಪಿಸಿದರು. ಪ್ರೊ.ಜಿ.ಬಿ.ಕರಗುಪ್ಪಿ ಸ್ವಾಗತಿಸಿದರು. ಪ್ರೊ.ಸುಪ್ರಿಯಾ ಕೊಣ್ಣೂರಿ ವಂದಿಸಿದರು.

ಫೋಟೋ ಇದೆ: ನಿಡಸೋಸಿ ಎಸ್‌ಜೆಪಿಎನ್ ಟ್ರಸ್ಟ್‌ನ ಕಂಪ್ಯೂಟರ್‌ಅಪ್ಲಿಕೇಷನ್ಸ್, ವಿಜ್ಞಾನ ಹಾಗೂ ವಾಣಿಜ್ಯ ಪದವಿ ಮಹಾವಿದ್ಯಾಲಯದ ವಾರ್ಷಿಕೋತ್ಸವ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗದ ರಿಜಿಸ್ಟ್ರಾರ್‌ಡಾ. ದೊಡ್ಡನಗೌಡ ಪಾಟೀಲ ಅವರನ್ನು ಸತ್ಕರಿಸಲಾಯಿತು.

ಆಕ್ರೋಶ... ಎನ್‌ಎಸ್‌ಟಿಪಿಎ ರಾಷ್ಟ್ರೀಯ ಅಧ್ಯಕ್ಷ ಡಾ.ಗಿರಿರಾಜ್ ಶಿರ ಕಿಡಿ

ಯೋಧರ ವಜಾ, ಅನ್ಯಾಯ

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ಗಡಿ ಭದ್ರತಾ ಪಡೆ(ಬಿಎಸ್‌ಎಫ್) ನೇಮಕಾತಿಯಲ್ಲಿ ತರಬೇತಿ ಪೂರ್ಣಗೊಳಿಸಿದ ನೂರಾರು ಯೋಧರನ್ನು ತಾಂತ್ರಿಕ ಕಾರಣಗಳನ್ನು ಮುಂದಿಟ್ಟು ಸೇವೆಯಿಂದ ವಜಾಗೊಳಿಸಿರುವುದು ಗಂಭೀರ ಅನ್ಯಾಯ ಎಂದು ಎನ್‌ಎಸ್‌ಟಿಪಿಎ ರಾಷ್ಟ್ರೀಯ ಅಧ್ಯಕ್ಷ ಡಾ.ಗಿರಿರಾಜ್ ಶಿರಗೆ ಆರೋಪಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2023ರ ನೇಮಕಾತಿಯಲ್ಲಿ ಎಲ್ಲಾ ಹಂತಗಳ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರೈಸಿದ ಅಭ್ಯರ್ಥಿಗಳು ಈಗ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದರು.

ಈ ಯುವಕರು ಶಾರೀರಿಕ, ಲಿಖಿತ ಸೇರಿದಂತೆ ಎಲ್ಲ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ವರ್ಷಕ್ಕಿಂತ ಹೆಚ್ಚು ಅವಧಿ ತರಬೇತಿಯನ್ನು ಪೂರ್ಣಗೊಳಿಸಿದ್ದಾರೆ. ಆದರೂ ಸ್ಕಿಲ್ ಎನ್‌ಎಸ್‌ಕ್ಯೂಎಫ್ ಪ್ರಮಾಣಪತ್ರದ ಹೆಸರಿನಲ್ಲಿ ಅವರ ಅರ್ಹತೆತಿರಸ್ಕರಿಸಿಸೇವೆಯಿಂದಬಿಡುಗಡೆಮಾಡಲಾಗಿದೆ. ಕುಕ್, ವೇಟರ್, ವಾಟರ್ ಕಾರಿಯರ್ ಹುದ್ದೆಗಳಿಗೆ ಆಯ್ಕೆಯಾಗಿ ಸುಮಾರು ಒಂದೂವರೆ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದ ಅಭ್ಯರ್ಥಿಗಳನ್ನು ಡ್ಯುಪ್ಲಿಕೇಟ್ ಪ್ರಮಾಣಪತ್ರ ನೆಪದಲ್ಲಿ ವಜಾಗೊಳಿಸಿದ್ದು, ಇದರಿಂದ



ಅನೇಕ ಯುವಕರು ಹಠಾತ್ ನಿರುದ್ಯೋಗಿಗಳಾಗಿದ್ದಾರೆ. ಇದರಿಂದ ಅವರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿದ್ದು, ಬಡ ಹಾಗೂ ಮಧ್ಯಮ ವರ್ಗದ ಯುವಕರ ಬದುಕು ಬೀದಿಗೆ ಬಿದ್ದಂತಾಗಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರ ತಾಂತ್ರಿಕ ಕಾರಣಗಳನ್ನು ಮುಂದಿಟ್ಟು ಯುವಕರ ಭವಿಷ್ಯ ಹಾಳು ಮಾಡಬಾರದು. ತಕ್ಷಣವೇ ಪೀಡಿತ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ನಡೆಸಿ, ಮರು ನೇಮಕಾತಿಗೆ ಅವಕಾಶ ಕಲ್ಪಿಸಬೇಕು. ದೇಶ ಸೇವೆ ಮಾಡುವ ಕನಸಿನಿಂದ ಬಂದ ಯುವಕರನ್ನು ಮಧ್ಯದಲ್ಲೇ ವಜಾಗೊಳಿಸುವುದು ಸರಿಯಲ್ಲ. ಮಾನವೀಯ ದೃಷ್ಟಿಯಿಂದ ಸರ್ಕಾರ ಈ ಸಮಸ್ಯೆಯನ್ನು ಪರಿಹರಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಾಗಾರ ಗೋವಾದ ಜಲ ಸಂಪನ್ಮೂಲ ಸಚಿವ ಸುಭಾಷ ಶಿರೋಡ್ಕರ್

ಇಂದು ಶಿಕ್ಷಕರಿಗೆ ಎಐ ಅಗತ್ಯ

• **ಕನ್ನಡಪ್ರಭ ವಾರ್ತೆ** ಬೈಲಹೊಂಗಲ

ಆಧುನಿಕ ಯುಗದಲ್ಲಿ ರೋಬೋಟಿಕ್ ಹಾಗೂ ಕೃತಕ ಬುದ್ಧಿಮತ್ತೆ(AI) ತಂತ್ರಜ್ಞಾನವನ್ನು ಶಿಕ್ಷಕರು ಅಳವಡಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ ಎಂದು ಗೋವಾ ಜಲ ಸಂಪನ್ಮೂಲ ಸಚಿವ ಸುಭಾಷ ಶಿರೋಡ್ಕರ್‌ಹೇಳಿದರು.

ನಗರದ ಪ್ರತಿಷ್ಠಿತ ಕಿತ್ತೂರ ರಾಣಿ ಚನ್ನಮ್ಮ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗಾಗಿ ಆಯೋಜಿಸಲಾದ ರೋಬೋಟಿಕ್ ತಂತ್ರಜ್ಞಾನ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ದೇಶದ ಭವಿಷ್ಯ ಮಕ್ಕಳ ಕೈಯಲ್ಲಿದ್ದು, ಅವರಿಗೆ ಸರಿಯಾದ ಮಾರ್ಗದರ್ಶನ ನೀಡುವಲ್ಲಿ ಶಿಕ್ಷಕರ ಪಾತ್ರವೇ ಅತ್ಯಂತ ಪ್ರಮುಖವಾಗಿದೆ ಎಂದರು.

ಸಂಸ್ಥೆಯ ಚೇರಮನ್ ಡಾ.ವಿಶ್ವನಾಥ ಪಾಟೀಲ ಮಾತನಾಡಿ, ಶಿಕ್ಷಣಕ್ಷೇತ್ರದಲ್ಲಿನಿರಂತರಬದಲಾವಣೆಗಳು ನಡೆಯುತ್ತಿದ್ದು, ಅವುಗಳಿಗೆ ಹೊಂದಿಕೊಳ್ಳುವುದು ಅನಿವಾರ್ಯವಾಗಿದೆ. ಕಂಪ್ಯೂಟರ್‌ಶಿಕ್ಷಣದ ಜೊತೆಗೆ ಆಧುನಿಕ ತಂತ್ರಜ್ಞಾನಗಳ ಬಳಕೆ ವಿದ್ಯಾರ್ಥಿಗಳಿಗೆ ಅತ್ಯಗತ್ಯವಾಗಿದೆ ಎಂದು ತಿಳಿಸಿದರು.

ಕ್ಯೂರಿಸ್ ಮೈಂಡ್ ಸಂಸ್ಥಾಪಕ ಮನೋಜ್ ಶ್ಯಾಮ ಸಾಂಡೇಕರ್‌ಕಾರ್ಯಾಗಾರದಲ್ಲಿ ಕುರಿತು ವಿವರವಾದ



ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಸಂಜಯ ಗಡತರನವರ, ಖಜಾಂಚಿ ಮಹಾಂತೇಶ ವಾಲಿ, ಉಪಸಮಿತಿ ಚೇರಮನ್ ಎನ್.ಎಸ್.ಪಾಟೀಲ, ನಿರ್ದೇಶಕರಾದ ಶಿರೀಷ ತುಡವೇಕರ, ದೀಪಕ ಸಂಗೊಳ್ಳಿ, ವೆನಿಲಾ ಗೋರೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಬಿ.ಬಿ.ಎ, ಹಾಗೂ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯ ಬಿ.ಬಿ.ಬೂದಿಹಾಳ, ಸುದೀಂದ್ರ ದೇಶಮುಖ, ಎಂ.ಎಸ್.ಇಂಚಲ, ಸಾಂಲಿ ಘಟಕದ ಸಂದೀಪ ನಾಗಣೆ ಮತ್ತು ಸಹಾಯಕ ಪ್ರಾಧ್ಯಾಪಕರು ಹಾಗು ಶಿಕ್ಷಕ ಶಿಕ್ಷಕಿಯರು ತರಬೇತಿಯಲ್ಲಿ ಹಾಜರಿದ್ದರು.

ಕಾರ್ಯಾಗಾರದ ಸಂಯೋಜಕ ಆಂಗ್ಲ ಮಾಧ್ಯಮ ಪ್ರಾಚಾರ್ಯ ಮಲ್ಲಿಕಾರ್ಜುನ ಬಿರಾದಾರ ಸ್ವಾಗತಿಸಿ, ನಿರೂಪಿಸಿದರು.

ಬೆಳಗಾವಿ ಕನ್ನಡಪರ ಸಂಘಟನೆಗಳ ಹೋರಾಟಕ್ಕೆ ಅನೇಕರ ಬೆಂಬಲ

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಕರ್ನಾಟಕ ಪರವಾದ ಗೊತ್ತುಗಳನ್ನು ಅಂಗೀಕರಿಸಬೇಕು ಎಂದು ಒತ್ತಾಯಿಸಿ ಹೋರಾಟ ನಡೆಸುತ್ತಿರುವ ಬೆಳಗಾವಿಯ ಕನ್ನಡ ಸಂಘಟನೆಗಳಿಗೆ ಬೆಂಗಳೂರಿನ ಹಲವು ಕನ್ನಡಪರ ಸಂಘಟನೆಗಳು ಬೆಂಬಲ ಸೂಚಿಸಿವೆ. ಈ ಹಿನ್ನೆಲೆಯಲ್ಲಿ ಮೇ.13ರಂದು ಪಾಲಿಕೆ ಆವರಣದ ಹೊರಗೆ ಧರಣಿ ಸತ್ಯಾಗ್ರಹ ನಡೆಸಲು ಶುಕ್ರವಾರ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಲಾಗಿದೆ. 2005ರ ಅ.27ರಂದು ಬೆಳಗಾವಿ ಪಾಲಿಕೆಯಲ್ಲಿ ಮಹಾರಾಷ್ಟ್ರ ಪರವಾದ ಗೊತ್ತುವಳಿ ಅಂಗೀಕಾರವಾಗಿತ್ತು. ಈ ವಿಷಯ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯಲ್ಲಿದೆ. ಕನ್ನಡಿಗರೇ ಬಹುಮತ ಹೊಂದಿರುವ ಪಾಲಿಕೆಯಲ್ಲಿ ಕರ್ನಾಟಕ ಪರ ಗೊತ್ತುವಳಿಗಳನ್ನು ಅಂಗೀಕರಿಸಬೇಕು ಎಂಬುದು ಕನ್ನಡ ಸಂಘಟನೆಗಳ ಆಗ್ರಹ. ಕಳೆದ ಏ.18ರಂದು ನಡೆದ ಪಾಲಿಕೆ ಸಭೆಯಲ್ಲಿ ಕರ್ನಾಟಕ ಪರ ಗೊತ್ತುವಳಿಗಳನ್ನು ಮಂಡನೆಗೆ ಅವಕಾಶ ನೀಡಿರಲಿಲ್ಲ. ಮೇ.13ರ ಸರ್ವಸಾಧಾರಣ ಸಭೆಯಲ್ಲಿ ಗೊತ್ತುವಳಿಗಳ ಅಂಗೀಕಾರಕ್ಕೆ ಆಗ್ರಹಿಸಿ ಮಹಾಪೌರ ಹಾಗೂ ಉಪಮಹಾಪೌರರಿಗೆ ಮನವಿ ಸಲ್ಲಿಸಲಾಗುವುದು. ಪಾಲಿಕೆಯಲ್ಲಿ ಬಿಜೆಪಿಯ 58 ಸದಸ್ಯರ ಪೈಕಿ 35 ಸದಸ್ಯರ ಬೆಂಬಲ ಇದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಕನ್ನಡಪರ ಸಂಘಟನೆಗಳ ನಾಯಕರು ಬಿಜೆಪಿ ಮುಖಂಡರನ್ನು ಭೇಟಿಯಾಗಿ ಚರ್ಚಿಸಿದ್ದಾರೆ. ಮೇ.13ರ ಧರಣಿಯಲ್ಲಿ ಭಾಗವಹಿಸುವವರು: ಕರ್ನಾಟಕ ರಕ್ಷಣಾ ವೇದಿಕೆ(ಶಿವರಾಮೇಗೌಡ ಬಣ) ಜಿಲ್ಲಾಧ್ಯಕ್ಷ ವಾಜೀದ ಹಿರೇಕೊಡಿ, ಸರ್ವೋದಯ ಸಂಘದ ಅಧ್ಯಕ್ಷ ಶ್ರೀನಿವಾಸ ತಾಳೂಕರ, ಗಡಿನಾಡು ಕನ್ನಡಿಗರ ಸೇನೆಯ ರಾಜ್ಯಾಧ್ಯಕ್ಷ ಬಲರಾಮ ಮಾಸೇನಟ್ಟಿ, ಕರವೇ ಯುವ ಸೇನೆ ಅಧ್ಯಕ್ಷ ಬಾಳಪ್ಪ ಗುಡಗೇನಟ್ಟಿ, ಜಯ ಕರ್ನಾಟಕ ಜನಪರ ವೇದಿಕೆ ಜಿಲ್ಲಾಧ್ಯಕ್ಷ ಶಿವರೆಡ್ಡಿ ಹುಚ್ಚರೆಡ್ಡಿ, ಕರುನಾಡ ರಕ್ಷಣಾ ವೇದಿಕೆ ಅಧ್ಯಕ್ಷ ಮಲ್ಲಪ್ಪ ಗುಡಗೇನಟ್ಟಿ ಹಾಗೂ ಕರವೇ (ಸ್ವಾಭಿಮಾನಿ ಬಣ) ಜಿಲ್ಲಾಧ್ಯಕ್ಷ ಈಶ್ವರಗೌಡ ಪಾಟೀಲ ಸೇರಿ ಹಲವರು ನೇತೃತ್ವ ವಹಿಸಲಿದ್ದಾರೆ.

ಸವದತ್ತಿ ಪಟ್ಟಣ ದಿನೇ ದಿನೇ ವಿಸ್ತಾರ ವಾಗುತ್ತಿದ್ದು, ಪಟ್ಟಣದಲ್ಲಿನ ದೇವಸ್ಥಾನ ಚಿಕ್ಕದಾಗಿ ರುವುದರಿಂದ ಮುಂದಿನ ದಿನಗಳಲ್ಲಿ ಗ್ರಾಮ ದೇವಿಯ ದೇವಸ್ಥಾನ ನಿರ್ಮಾಣಕ್ಕೆ ಕನಿಷ್ಠ 5 ಎಕರೆ ಜಾಗ ತೆಗೆದುಕೊಂಡರೆ ನಮ್ಮ ಕುಟುಂಬ ಹಾಗೂ ಮಾಮನಿ ಫೌಂಡೇಷನ್‌ನಿಂದ ಹೆಚ್ಚಿನ ಆರ್ಥಿಕ ನೆರವು ನೀಡುವೆ

• **ಮಲ್ಲಿಕಾರ್ಜುನ ಮಾಮನಿ** ಜಾರಿ ನಿರ್ದೇಶನಾಲಯದ ಉಪನಿರ್ದೇಶಕ

ಧಾರ್ಮಿಕ ಕಾರ್ಯಗಳಿಂದ ಬದುಕಲ್ಲಿ ನೆಮ್ಮದಿ

ಗ್ರಾಮದೇವತೆಯರ ಜಾತ್ರೆಯ ಧಾರ್ಮಿಕ ಸಭೆಯಲ್ಲಿ ರಾಜ್ಯ ಚುನಾವಣಾ ಆಯುಕ್ತ ಡಾ.ಜಿ.ಎಸ್.ಸಂಗ್ರೇಶಿ

• **ಕನ್ನಡಪ್ರಭ ವಾರ್ತೆ** ಸವದತ್ತಿ

ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಅನೇಕ ಗೊಂದಲಗಳು ಸೃಷ್ಟಿಯಾಗುತ್ತಿದ್ದು, ಗ್ರಾಮದೇವಿಯ ಜಾತ್ರಾ ಮಹೋತ್ಸವದಂತಹ ಧಾರ್ಮಿಕ ಕಾರ್ಯಕ್ರಮಗಳು ಸಮಾಜವನ್ನು ಒಗ್ಗೂಡಿಸುವ ಜೊತೆಗೆ ನೆಮ್ಮದಿಯ ಬದುಕನ್ನು ನಿರ್ಮಿಸುತ್ತವೆ ಎಂದು ರಾಜ್ಯ ಚುನಾವಣಾ ಆಯುಕ್ತ ಡಾ.ಜಿ.ಎಸ್.ಸಂಗ್ರೇಶಿ ಹೇಳಿದರು.

ಪಟ್ಟಣದ ಗ್ರಾಮದೇವಿಯ ಕಾಡಸಿದ್ದೇಶ್ವರ ವೇದಿಕೆ ಮೇಲೆ ನಡೆದ ಧಾರ್ಮಿಕ ಸಭೆ ಮತ್ತು ಸಾರ್ವಜನಿಕ ಸಭೆಯ ನಾಲ್ಕನೇ ದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಜನರಲ್ಲಿರುವ ಮತಶಕ್ತಿಯು ಅತ್ಯಂತ ಪ್ರಭಾವಶಾಲಿಯಾಗಿದ್ದು, ಚುನಾವಣೆಗಳಲ್ಲಿ ಯೋಗ್ಯರ ಆಯ್ಕೆಗೆ ತಮ್ಮ ಶಕ್ತಿಯ ಪ್ರಭಾವ ಬೀರಲಿ ಎಂದು ಹೇಳಿದರು.

ಜಾರಿ ನಿರ್ದೇಶನಾಲಯದ ಉಪನಿರ್ದೇಶಕ ಮಲ್ಲಿಕಾರ್ಜುನ ರಾಜಣ್ಣ ಮಾಮನಿ ಮಾತನಾಡಿ, ಸವದತ್ತಿ ಗ್ರಾಮ ದೇವಿಯ ಜಾತ್ರೆಯು ಜನಮಾನಸದಲ್ಲಿ ನೆನಪಿಡುವಂತದ್ದಾಗಿದೆ. ಜಾತ್ರೆಯ ಯಶಸ್ಸಿಗೆ ಶ್ರಮವಹಿಸಿರುವುದು ಇಂದು ಸಾರ್ಥಕತೆಯತ್ತ ಸಾಗುತ್ತಿದೆ. ಸವದತ್ತಿ ಪಟ್ಟಣ ದಿನೇ ದಿನೇ ವಿಸ್ತಾರ ವಾಗುತ್ತಿದ್ದು, ಪಟ್ಟಣದಲ್ಲಿನ ದೇವಸ್ಥಾನ ಚಿಕ್ಕದಾಗಿರುವುದರಿಂದ ಮುಂದಿನ ದಿನಗಳಲ್ಲಿ ಗ್ರಾಮ ದೇವಿಯ ದೇವಸ್ಥಾನ ನಿರ್ಮಾಣಕ್ಕೆ ಕನಿಷ್ಠ 5 ಎಕರೆ ಜಾಗ ತೆಗೆದುಕೊಂಡರೆ ನಮ್ಮ ಕುಟುಂಬ ಹಾಗೂ ಮಾಮನಿ ಫೌಂಡೇಷನ್‌ನಿಂದ ಹೆಚ್ಚಿನ ಆರ್ಥಿಕ ನೆರವು ನೀಡುವದಾಗಿ ಭರವಸೆ ನೀಡಿದರು.

ತಹಸೀಲ್ದಾರ ಮಲ್ಲಿಕಾರ್ಜುನ ಹೆಗ್ಗಣ್ಣವರ ಹಾಗೂ ಡಿಎಸ್‌ಪಿ ಚಿದಂಬರ ಮಡಿವಾಳರ ಮಾತನಾಡಿ, ಜಾತ್ರೆಗೆ ತಾಲೂಕು ಆಡಳಿತ ಸಂಪೂರ್ಣ ಸಹಕಾರ ನೀಡುತ್ತಿದೆ. ಎಲ್ಲ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ನಮ್ಮೂರ ಜಾತ್ರೆ ಎಂದುಟೀಮ್ ವರ್ಕ ಮಾಡುತ್ತಿರುವುದಾಗಿ ತಿಳಿಸಿದರು.

ಬೈಲಹೊಂಗಲ ಮೂರುಸಾವಿರಮಠದ ಶ್ರೀ ಪ್ರಭು ನೀಲಕಂಠ ಮಹಾಸ್ವಾಮೀಜಿ ಮಾತನಾಡಿ, ಜಾತ್ರೆಗಳು ಭಂಡಾರ ಹಚ್ಚಿಕೊಂಡು ಕುಣಿದು ಕುಪ್ಪಳಿಸುವ ಜಾತ್ರೆಗಳಾಗದೆ ಅದರ ಮಹತ್ವ ಅರಿವು ನಮಗಿರಬೇಕು. ಸಂಪತ್ತಿನ ಪರ್ಯಾಯ ಶಬ್ದವೇ ಭಂಡಾರ, ಅದನ್ನು ಹಚ್ಚಿಕೊಂಡು ಜಾತ್ರೆ ಮಾಡುವ ಸಂಭ್ರಮವೇ ಬೇರೆ ಎಂದರು.

ಮುರಗೋಡದ ಶ್ರೀ ನೀಲಕಂಠ ಮಹಾಸ್ವಾಮೀಜಿ, ಕಾಗಿನೆಲೆ ಕನಕಗುರುಪೀಠದ ಅಮೋಘ ಸಿದ್ದೇಶ್ವರ ಸ್ವಾಮೀಜಿ, ಭಾಗೋಜಿಕೊಪ್ಪದ ಶಿವಲಿಂಗ ಮುರುಘರಾಜೇಂದ್ರ ಸ್ವಾಮೀಜಿ, ಸತ್ತಿಗೇರಿಯ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಕೆ.ಶಿವಾಪುರದ ಜಡೆತಲೆ ಮರುಳಸಿದ್ದೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿದ ರು. ಜಾರಿ ನಿರ್ದೇಶನಾಲಯದ ಉಪನಿರ್ದೇಶಕ ಮಲ್ಲಿಕಾರ್ಜುನ ಮಾಮನಿ ಮತ್ತು ಉಪವಿಭಾಗಾಧಿಕಾರಿ ಅಪೂರ್ವ ಮಾಮನಿ ಅವರನ್ನು ಸನ್ಮಾನಿಸಲಾಯಿತು.

ಶಾಸಕ ವಿಶ್ವಾಸ ವೈದ್ಯ ಮತ್ತು ಜಾತ್ರಾ ಸಮಿತಿ ಅಧ್ಯಕ್ಷ ವಿರುಪಾಕ್ಷ ಮಾಮನಿ ನೇತೃತ್ವವಹಿಸಿದ್ದರು. ಪುರಸಭೆ ಮಾಜಿ ಅಧ್ಯಕ್ಷ ಶಿವಾನಂದ ಹೂಗಾರ, ಅಲ್ಲಮಪ್ರಭು ಪ್ರಭುನವರ, ಚಂದ್ರಣ್ಣ ಶಾಮರಾಯನವರ, ಮಲ್ಲಿಕಾರ್ಜುನ ಪುರದಗುಡಿ, ನಗರಾಭಿವೃದ್ಧಿ ಪ್ರಾಧಿಕಾರದ ಉಪನಿರ್ದೇಶಕ ವಿಷ್ಣು ತೇರದಾಳ, ಎಸಿಪಿ ಶಿವಾನಂದ ಚಲವಾದಿ, ತಾಪಂ ಇಒ ಆನಂದ ಬಡಕುಂದರಿ, ಪೌರಾಯುಕ್ತ ಸಂಗನಬಸಯ್ಯ ಗದಗಿಮಠ, ಬಿಇಒ ಎ.ಎ.ಖಾಜಿ,ಎಚ್.ಎ.ಕದ್ರಾಪುರ, ಸಿಡಿಪಿಒ ಅಮೃತ ಸಾಣಿಕೊಪ್ಪ, ಕೃಷಿಇಲಾಖೆ ಸಹಾಯಕ ನಿರ್ದೇಶಕ ಶಿವಪ್ರಕಾಶ ಪಾಟೀಲ, ಟಿಎಚ್‌ಒ ಶ್ರೀಪಾದ ಸಬನೀಸ, ಡಾ.ಎಚ್.ಎಮ್.ಮಲ್ಲನಗೌಡರ, ಡಾ.ಅನೀಲ ಮರಲಿಂಗಣ್ಣವರ, ಆರ್.ಆರ್.ಕುಲಕರ್ಣಿ, ಕೃಷ್ಣಮೂರ್ತಿ ನಾಯ್ಕ, ರಮೇಶ ದೇವರಡ್ಡಿ, ನಾಗೇಶ ಸೇರಿ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳನ್ನು ಹಾಗೂ ಗಣ್ಯರನ್ನು ಗೌರವಿಸಲಾಯಿತು. ಡಾ.ವೈ.ಎಮ್.ಯಾಕೊಳ್ಳಿ ಸ್ವಾಗತಿಸಿದರು. ಶಿವಾನಂದ ತಾರೀಹಾಳ ನಿರೂಪಿಸಿದರು. ಮಹೇಶ ಶಿರಸಂಗಿ ವಂದಿಸಿದರು.





ದೇವಿ ದರ್ಶನ ಪಡೆದ ಸಚಿವ ಸತೀಶ ಜಾರಕಿಹೊಳಿ

• **ಕನ್ನಡಪ್ರಭ ವಾರ್ತೆ** ಸವದತ್ತಿ



ಪಟ್ಟಣದಲ್ಲಿ ನಡೆಯುತ್ತಿರುವ ಗ್ರಾಮದೇವಿಯ ಜಾತ್ರಾ ಉತ್ಸವದ ಐದನೇ ದಿನ ಶುಕ್ರವಾರ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿನಗರದಕೋಟೆಯಿಂದ ದೇವಸ್ಥಾನದ ಕಟ್ಟೆಯವರೆಗೆ ಶಾಸಕ ವಿಶ್ವಾಸ ವೈದ್ಯ ಸೇರಿದಂತೆ ಅಭಿಮಾನಿಗಳೊಂದಿಗೆ ಕಾಲ್ನಡಿಗೆ ಮೂಲಕ ಆಗಮಿಸಿ ಗ್ರಾಮದೇವಿಯ ದರ್ಶನ ಪಡೆದರು.

ಕೋಟೆಯಿಂದ ವಿವಿಧ ವಾದ್ಯ ಮೇಳದೊಂದಿಗೆ ಶಾಸಕ ವಿಶ್ವಾಸ ವೈದ್ಯ ಅವರ ಕುಟುಂಬ ಸೇರಿದಂತೆ ಸಚಿವರು ಮತ್ತು ಸಾರ್ವಜನಿಕರೊಂದಿಗೆ ಪೋಸ್ಟ್ ಆಫೀಸ್, ಗಾಂಧಿಚೌಕ್ ಮಾರ್ಗವಾಗಿ ಸಾಂಪ್ರದಾಯಕ ವಾದ್ಯಗಳೊಂದಿಗೆ ಕಾಲ್ನಡಿಗೆ ಮೂಲಕ ಆಗಮಿಸಿ ಗ್ರಾಮದೇವಿಯರಿಗೆ ವೈದ್ಯ ಮನೆತನದಿಂದ ಉಡಿ ತುಂಬಿ ದೇವಿಯ ಕೃಪೆಗೆ ಪಾತ್ರರಾದರು. ಗ್ರಾಮದೇವಿ ಕಟ್ಟಿಯ ಮಂಟಪದಲ್ಲಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಜಾತ್ರಾ ಉತ್ಸವ ಸಮಿತಿ ಅಧ್ಯಕ್ಷ ವಿರುಪಾಕ್ಷ ಮಾಮನಿ, ಗೌರವಾಧ್ಯಕ್ಷ ವಿಶ್ವಾಸ ವೈದ್ಯ ಸನ್ಮಾನಿಸಿ ಗೌರವಿಸಿದರು. ಈ ವೇಳೆ ಫಕೀರಪ್ಪ ಹದ್ದನ್ನವರ, ಶಾಸಕರ ತಾಯಿ ಅಲ್ಕಾ, ಪತ್ನಿ ಶೃತಿ ವೈದ್ಯ, ಅಶ್ವತ ವೈದ್ಯ, ಶ್ರೀದೇವಿ ವೈದ್ಯ, ಡಿ.ಡಿ.ಟೋಪೋಜಿ, ಪ್ರವೀಣ ರಾಮಪ್ಪನವರ, ವಿಜಯ ಸಂಗಪ್ಪಗೋಳ, ಮಲ್ಲು ಜಕಾತಿ, ಗಿರೀಶ ಮುನವಳ್ಳಿ, ಸಂತೋಷ ನೊರೆಯವರ ಇತರರು ಉಪಸ್ಥಿತರಿದ್ದರು.

ಅಭಿಮಾನೋತ್ಸವದಲ್ಲಿ ಮುಖಂಡರು, ಕಾರ್ಯಕರ್ತರು ಭಾಗಿ: ಮಾಜಿ ಶಾಸಕ ಮೆಟಗುಡ್ಡ

ಬೈಲಹೊಂಗಲ: ಚಿತ್ರದುರ್ಗದಲ್ಲಿ ಮೇ.9ರಂದು ನಡೆಯುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಬೈಲಹೊಂಗಲ ಕ್ಷೇತ್ರದಿಂದ ಸಾವಿರಾರು ಕಾರ್ಯಕರ್ತರು, ಮುಖಂಡರು ಹಾಗೂ ಅಭಿಮಾನಿಗಳು ಭಾಗವಹಿಸಲಿದ್ದಾರೆ ಎಂದು ಮಾಜಿ ಶಾಸಕ ಜಗದೀಶ ಮೆಟಗುಡ್ಡ ಹೇಳಿದರು.

ಶುಕ್ರವಾರ ಪತ್ರಿಕೆಯೊಂದಿಗೆ ಮಾತನಾಡಿ. ಯಡಿಯೂರಪ್ಪ ಅವರು ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿ 50 ವರ್ಷ ಪೂರೈಸುತ್ತಿರುವ ಹಿನ್ನೆಲೆ ಅಭಿಮಾನೋತ್ಸವ ಹಮ್ಮಿಕೊಳ್ಳಲಾಗಿದೆ. ಈ ರಾಜ್ಯಮಟ್ಟದ ಸಮಾರಂಭಕ್ಕೆ ಬೈಲಹೊಂಗಲ ಕ್ಷೇತ್ರದಿಂದಲೂ ಭಾರೀ ಸಂಖ್ಯೆಯಲ್ಲಿ ಕಾರ್ಯಕತ ರ್ರನ್ನು ಕರೆದೊಯ್ಯಲು ಸಿದ್ಧತೆ ನಡೆದಿದೆ ಎಂದರು.



ಈ ಕುರಿತು ಈಗಾಗಲೇ ಕ್ಷೇತ್ರದ ವಿವಿಧ ಭಾಗಗಳಲ್ಲಿ ಸಭೆಗಳನ್ನು ನಡೆಸಿದ್ದು, ಗ್ರಾಮ ಹಾಗೂ ಬೂತ್ ಮಟ್ಟದ ಕಾರ್ಯಕರ್ತರಿಗೆ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮನವಿ ಮಾಡಲಾಗಿದೆ. ವಾಹನಗಳ ವ್ಯವಸ್ಥೆ ಮಾಡಲಾಗುತ್ತಿದ್ದು, ಸಾವಿರಾ ರು ಜನರು ಕಾರ್ಯಕ್ರಮಕ್ಕೆ ತೆರಳಲಿದ್ದಾರೆ ಎಂದರು.

ಬಿ.ಎಸ್.ಯಡಿಯೂರಪ್ಪ ಅವರು ಹೋರಾಟದ ರಾಜಕಾರಣದ ಮೂಲಕ ಸಾಮಾನ್ಯ ಕಾರ್ಯಕರ್ತನಿಂದ ಮುಖ್ಯಮಂತ್ರಿಯಾಗಿ ಬೆಳೆದ ನಾಯಕರು. ರೈತರು, ಕಾರ್ಮಿಕರು, ಬಡವರು ಹಾಗೂ ಹಿಂದುಳಿದ ವರ್ಗಗಳ ಪರವಾಗಿ ಅನೇಕ ಜನಪರ ಯೋಜನೆಗಳನ್ನು ನೀಡಿ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಿದ್ದಾರೆ. ಅವರ ಆಡಳಿತಾವಧಿಯಲ್ಲಿ ನೀರಾವರಿ, ಗ್ರಾಮೀಣ ಅಭಿವೃದ್ಧಿ, ರಸ್ತೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗಿತ್ತು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಹಲವು ರಾಷ್ಟ್ರೀಯ ಹಾಗೂ ರಾಜ್ಯ ನಾಯಕರು ಭಾಗವಹಿಸಲಿದ್ದಾರೆ. ಈ ಸಮಾವೇಶ ರಾಜ್ಯ ರಾಜಕೀಯದಲ್ಲಿ ಹೊಸ ಉತ್ಸಾಹ ಮೂಡಿಸುವುದರ ಜೊತೆಗೆ ಪಕ್ಷ ಸಂಘಟನೆಗೆ ಇನ್ನಷ್ಟು ಬಲ ತುಂಬಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಾಲವಿಕಾಸ ನಡಿಗೆ ಪಾಲಕರ ಕಡೆಗೆ ತರಬೇತಿ



• **ಕನ್ನಡಪ್ರಭ ವಾರ್ತೆ** ಖಾನಾಪುರ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ ಮತ್ತು ಬಾಲವಿಕಾಸ ಅಕಾಡೆಮಿ ಸಹಯೋಗದಲ್ಲಿ ನಡೆಯುತ್ತಿರುವ ಬಾಲವಿಕಾಸ ನಡಿಗೆ ಪಾಲಕರ ಕಡೆಗೆ ಯೋಜನೆಯ ಸಮರ್ಪಕ ಅನುಷ್ಠಾನದ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ ಆಯ್ದ ಮಕ್ಕಳು ಮತ್ತು ಪಾಲಕರಿಗೆ ತರಬೇತಿಯನ್ನು ನೀಡಲಾಗುತ್ತಿದೆ ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಅಡಿವೇಶ ಇಟಗಿ ತಿಳಿಸಿದರು.ಪಟ್ಟಣದ ಸ್ವಾಮಿ ವಿವೇಕಾನಂದ ಶಾಲೆಯಲ್ಲಿ ಶುಕ್ರವಾರ ಜರುಗಿದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಿಡಿಪಿಒ ವಿಕ್ರಮ.ಕೆ.ಬಿ.ಮಾತನಾಡಿ, 3 ರಿಂದ 18 ವರ್ಷ ವಯೋಮಾನದ ಮಕ್ಕಳು ಮತ್ತು ಪಾಲಕರಿಗೆ ಮಕ್ಕಳ ಹಕ್ಕುಗಳು, ಮಕ್ಕಳ ಸಹಾಯವಾಣಿ, ಮಕ್ಕಳಿಗಾಗಿ ಇರುವ ಕಾಯ್ದೆಗಳು, ಮಕ್ಕಳ ಪಾಲನೆ-ಪೋಷಣೆಯಲ್ಲಿ ಪಾಲಕರ ಜವಾಬ್ದಾರಿ ಮತ್ತಿತರ ವಿಷಯಗಳ ಕುರಿತು ಅರಿವು ಮೂಡಿಸಲು ಈ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಈ ವೇಳೆಬಿಇಒ ಪಿ.ರಾಮಪ್ಪ, ಸಂಪನ್ಮೂಲ ವ್ಯಕ್ತಿಗಳಾದ ಎನ್.ಬಿ.ದ್ಯಾಪೂರ, ಮನ್ಸೂರ ಅಲಿ, ಸಂತೋಷ ನಾಯ್ಕ, ಐ.ಜಿ.ಸನದಿ ಸೇರಿ ಅಧಿಕಾರಿಗಳು ಇದ್ದರು. ಸಂದೀಪ ದೇಶಮುಖ ನಿರ್ವಹಿಸಿದರು. ಶಂಕರ ಕಮ್ಮಾರ ವಂದಿಸಿದರು.

ನಾಳೆ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರ ಭೇಟಿ

ಬೆಳಗಾವಿ: ಪ.ಜಾ ಮತ್ತು ಪ.ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ ದ ಅಧ್ಯಕ್ಷೆ ಪಲ್ಲವಿ.ಜಿ ಅವರು ಮೇ.10 ರಂದು ಬೆಳಗಾವಿ ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಮೇ.11ರಂದು ನಿಪ್ಪಾಣಿ ತಾಲೂಕಿನ ಭೋಜ್ ಗ್ರಾಮದಲ್ಲಿ ತಹಸೀಲ್ದಾರ್, ಸಂಬಂ ಧಿಸಿದ ನಗರಸಭೆಯ ಮುಖ್ಯಾಧಿಕಾ ರಿಗಳು, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶ ಕರು ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ಇತರೆ ಅಧಿಕಾರಿ ಗಳ ಜೊತೆಗೆ ಪರಿಶಿಷ್ಟ ಜಾತಿ ಅಲೆಮಾರಿ ಮಾಂಗ್, ಗಾರುಡಿಮತ್ತು ಕೊರಮಸಮುದಾಯದ ಕುಟುಂಬಗಳು ವಾಸಿಸುತ್ತಿರುವ ಸ್ಥಳ ವೀಕ್ಷಣೆ ಹಾಗೂ ಜನಸ್ಪಂದ ನ ಹಾಗೂ ಕುಂದು ಕೊರತೆಗಳ ಸಭೆ ನಡೆಸಲಿ ದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
(ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ನೋಂದಾಯಿತಕಛೇರಿ: ದಿ ಫೇರ್‌ವೇ, ನೆಲಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

ಇ-ಹರಾಜು ಸೂಚನೆ

2002ರ ಭದ್ರತಾ ಹಿತಾಸಕ್ತಿ ನಿಯಮಗಳ ಪ್ರಾವಿಸೋ ರೂಲ್ 8(6) ಮತ್ತು 9 ರೊಂದಿಗೆ ಓದಿಕೊಳ್ಳಬೇಕಾದ ಸೆಕ್ಯುರೈಟೆಜೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಸರ್ಫೇಸಿ ಕಾಯಿದೆ), 2002 ರಡಿ ಆಸ್ತಿಗಳ ಇ-ಹರಾಜು ಮಾರಾಟಕ್ಕಾಗಿ ಸಾರ್ವಜನಿಕ ಸೂಚನೆ

ಆದಾಗ್ಯೂ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಸರ್ಫೇಸಿ ಕಾಯಿದೆಯ ಕಲಂ 13(4)ರಡಿ ಕೆಳಕಂಡ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಮಾಹಿತಿ ನೀಡುವುದೇನೆಂದರೆ ಸಾಲ ಪಡೆಯಲು ಸಾಲಗಾರರು ಅಡಮಾನ ಮಾಡಿರುವ ಆಸ್ತಿಗಳನ್ನು ಬ್ಯಾಂಕಿಗೆ ಬಾಕಿಯಾಗಿರುವ ಸಾಲಗಳ ವಸೂಲಾತಿಗಾಗಿ ''ಎಲ್ಲಿ ಹೇಗಿದೆಯೋ ಹಾಗೆಯೇ'' ಹಾಗೂ ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಆನ್‌ಲೈನ್ ಹರಾಜು (ಇ-ಹರಾಜು) ಮೂಲಕ ಸರ್ಫೇಸಿ ಕಾಯಿದೆಯಂತೆ ಇ-ಹರಾಜು ಮಾರಾಟ ಮಾಡಲಾಗುತ್ತದೆ.

ಕ್ರ. ಸಂ.	ಸಾಲದ ಖಾತಾ ಸಂಖ್ಯೆ	ಮೂಲ ಸಾಲಗಾರ/ ಸಹ-ಸಾಲಗಾರ/ ಜಾಮೀನುದಾರ/ಹೆಸರು	13-2 ನೋಟೀಸ್ ದಿನಾಂಕ	ಸ್ವಾಧೀನತೆಯ ದಿನಾಂಕ	ಪ್ರಸ್ತುತ ಬಾಕಿ ಮೊತ್ತ 05.05.2026ರಂದು ಇದ್ದಂತೆ	ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ	ಮೀಸಲು ಬೆಲೆ ಐಎನ್‌ಆರ್	ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಂಡಿ) ಐಎನ್ ಆರ್	ಇ-ಹರಾಜಿನ ದಿನಾಂಕ ಮತ್ತು ಸಮಯ	ಬಿಡ್ ಸಲ್ಲಿಸಲು ಸ್ಥಳ ಮತ್ತು ಕೊನೆಯ ದಿನಾಂಕ ಮತ್ತು ಸಮಯ
1	31130530000081 & 31139410000924	1) ಶ್ರೀ ಫಯಾಜ್ ಅಮೀನ್ ಗಡ, 2) ಶ್ರೀಮತಿ ಅಲ್ಲಿಯಾ ಫಯಾಜ್ ಅಮೀನ್‌ಗಡ, 3) ಶ್ರೀ ಬಾಬುಸಾಬ್ ಹುಸೇನ್ ಸಾಬ್ ಅಮೀನ್‌ಗಡ	13.12. 2025	30.04. 2026	ರೂ.7,01,578.40 (ಏಳು ಲಕ್ಷದ ಒಂದು ಸಾವಿರದ ಐದುನೂರ ಎಪ್ಪತ್ತೆಂಟು ರೂ. ಮತ್ತು ನಲವತ್ತು ಪೈಸೆ ಮಾತ್ರ)	29.05.2026 Time: 09:30 AM to 05:00 PM	ರೂ.12,55,000/- (ಹನ್ನೆರಡು ಲಕ್ಷದ ಐವತ್ತೈದು ಸಾವಿರ ರೂ. ಮಾತ್ರ)	ರೂ.1,25,500/- (ಒಂದು ಲಕ್ಷದ ಇಪ್ಪತ್ತೈದು ಸಾವಿರದ ಐದುನೂರು ರೂ. ಮಾತ್ರ)	12.06.2026 @ 02:00 PM	11.06.2026, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಮುಖ್ಯ ಕಛೇರಿ: ದಿ ಫೇರ್‌ವೇ, ನೆಲ ಮಹಡಿ ಮತ್ತು ಮೊದನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿ ಎಲ್ ಬಿಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು- 560071.
	ಭದ್ರತಾ ಆಸ್ತಿಯ ವಿವರಣೆ : ಸಕಲ ಸಮಸ್ತವೂ ಸೇರಿದ ಸ್ಥಿರಾಸ್ತಿ ಮಾಲೀಕತ್ವ ಮತ್ತು ಸ್ವಾಧೀನತೆ ಹೊಂದಿರುವ ವಸತಿ ಮನೆ ಆಸ್ತಿ ಸರ್ವೆ ಸಂ. 393/X1X1P2, ಮಹಲ್‌ಬಗಾಯತ್, ವಿಜಯಪುರ, ವಿಜಯಪುರ ಅಳತೆ 0-00-08-00 ಅನ್ನು ಹೊಂದಿರುವ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಖಾಲಿ ಸ್ಥಳ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಪ್ಲಾಟ್ ಸಂ. 13 ರಫೀಕ್ ಅಮೀನ್‌ಗಡ, ದಕ್ಷಿಣಕ್ಕೆ: ನಜೀರ್ ಅಮೀನ್‌ಗಡರ ವರ ಆಸ್ತಿ.									
2	45420430000298 & 45429410000280	1) ಶ್ರೀ ವಿಲಾಸ್ ರತನ್‌ಸಿಂಗ್ ಲಮಾನಿ, 2) ಶ್ರೀಮತಿ ಪುತಲಬಾಯಿ ಲಮಾನಿ	13.12. 2025	29.04. 2026	ರೂ.5,92,884.07 (ಐದು ಲಕ್ಷದ ತೊಂಭತ್ತೆರಡು ಸಾವಿರದ ಎಂಟುನೂರ ಎಂಭತ್ತನಾಲ್ಕು ರೂ. ಮತ್ತು ಏಳು ಪೈಸೆ ಮಾತ್ರ)	29.05.2026 Time: 09:30 AM to 05:00 PM	ರೂ.3,96,000/- (ಮೂರು ಲಕ್ಷದ ತೊಂಭತ್ತಾರು ಸಾವಿರ ರೂ. ಮಾತ್ರ)	ರೂ.39,600/- (ಮೂವತ್ತೊಂಭತ್ತು ಸಾವಿರದ ಆರುನೂರು ರೂ. ಮಾತ್ರ)	12.06.2026 @ 02:00 PM	11.06.2026, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಮುಖ್ಯ ಕಛೇರಿ: ದಿ ಫೇರ್‌ವೇ, ನೆಲ ಮಹಡಿ ಮತ್ತು ಮೊದನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿ ಎಲ್ ಬಿಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು- 560071.
	ಭದ್ರತಾ ಆಸ್ತಿಯ ವಿವರಣೆ : ಸಕಲ ಸಮಸ್ತವೂ ಸೇರಿದ ಸ್ಥಿರಾಸ್ತಿ ಮಾಲೀಕತ್ವ ಮತ್ತು ಸ್ವಾಧೀನತೆ ಹೊಂದಿರುವ ವಸತಿ ಮನೆ ಆಸ್ತಿ ಸರ್ವೆ ಸಂ. 05/4 ಹುಬನೂರು LT-02 ಗ್ರಾಮ, ತಾಲ್ಲೂಕು-ಟಿಕೋಟಾ ಮತ್ತು ಜಿಲ್ಲೆ-ವಿಜಯಪುರ ಒಟ್ಟಾರೆ ಅಳತೆ 1024 ಚ.ಅ. ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಖಾಲಿ ನಿವೇಶನ, ಪಶ್ಚಿಮಕ್ಕೆ: ಪಾಂಡು ಲೈಸಿಂಗ್ ಲಮಾನಿರವರ ಆಸ್ತಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸುರೇಶ್ ಭಾವಸಿಂಗ್ ಲಮಾನಿ ಅವರ ಆಸ್ತಿ.									

ಆಸ್ತಿಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಮಾರಾಟ ಮಾಡಲಾಗುವುದು. ಇ-ಹರಾಜನ್ನು ''ಆನ್ ಲೈನ್'' ಮೂಲಕ ನಡೆಸಲಾಗುತ್ತದೆ. ಹರಾಜನ್ನು ಬ್ಯಾಂಕ್ ಅಂಗೀಕೃತ ಸೇವಾ ಒದಗಿಸುವವರಾದ **M/s. Auctionbazaar.com** ಮೂಲಕ **contact@auctionbazaar.com, support@auctionbazaar.com, eauctions@auctionbazaar.com.** ಎಂಬುವ ವೆಬ್‌ಪೋರ್ಟಲ್‌ನಲ್ಲಿ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮತ್ತು ವಿವರಗಳಿಗಾಗಿ, ನೆರವಿಗಾಗಿ, ಕ್ರಮಗಳ ತಿಳಿದುಕೊಳ್ಳುವುದಕ್ಕಾಗಿ ಮತ್ತು ಇ-ಹರಾಜು ಆನ್‌ಲೈನ್ ತರಬೇತಿ ಪಡೆದುಕೊಳ್ಳುವುದಕ್ಕಾಗಿ ಭಾವಿ ಬಿಡ್‌ದಾರರು **M/s. Auctionbazaar.com** ಸಂಪರ್ಕ **Auctionbazaar** ಸಂಪರ್ಕ ಸಂ. **91 8370969696/ +91 7997043999. Email id: contact@auctionbazaar.com, support@auctionbazaar.com.** ಇವರನ್ನು ಸಂಪರ್ಕಿಸುವುದು. ಷರತ್ತು ಮತ್ತು ನಿಬಂಧನೆಗಳ ಹೆಚ್ಚಿನ ವಿವರಗಳಿಗಾಗಿ ಹಾಗೂ ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕಾಗಿ ಹಾಗೂ ಆಸ್ತಿ ಸಂಬಂಧಿತ ಯಾವುದೇ ವಿವರಗಳಿಗಾಗಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅಧೀಕೃತ ಅಧಿಕಾರಿಗಳಾದ ಶ್ರೀ ಉಮೇಶ್ (ಮೊ.ಸಂ. 8050149617) ಶ್ರೀ ಕೌಶಿಕ್ ಬಿ (ಮೊ.ಸಂ. 7019949040) ಮತ್ತು ಶ್ರೀ ರಂಜನ್ ನಾಯಕ್, (ಮೊ.ಸಂ. 6362952653) ಅನ್ನು ಸಂಪರ್ಕಿಸುವುದು. ಅಧಿಕೃತ ಅಧಿಕಾರಿಗಳ ಉತ್ತಮ ತಿಳುವಳಿಕೆ ಮತ್ತು ಮಾಹಿತಿಗೆ ಬಂದಂತೆ ಆಸ್ತಿಗಳ ಮೇಲೆ ಯಾವುದೇ ಋಣಭಾದ್ಯತೆಗಳು ಇಲ್ಲ. ಆದಾಗ್ಯೂ, ಇಚ್ಛೆಯುಳ್ಳ ಬಿಡ್‌ದಾರರು ಬಿಡ್ ಸಲ್ಲಿಸುವ ಮುಂಚೆ ಆಸ್ತಿಯ ಋಣಭಾದ್ಯತೆಗಳು ಹಾಗೂ ಸ್ವಾಮ್ಯ ಮುಂತಾದವುಗಳ ಬಗ್ಗೆ ಅವರದೇ ಸ್ವತಂತ್ರ ವಿಚಾರಣೆಗಳನ್ನು ನಡೆಸಿ ತಿಳಿದುಕೊಳ್ಳಬಹುದಾಗಿದೆ. ಷರತ್ತಿನ ಬಿಡ್‌ಗಳನ್ನು ಒಪ್ಪಿಕೊಳ್ಳುವುದಿಲ್ಲ. ಮೇಲೆ ಹೆಸರಿಸಲಾದ. ಸಾಲಗಾರರು/ ಜಾಮೀನುದಾರರು/ ಅಡಮಾನದಾರರುಗಳಿಗೆ ಈ ಮೂಲಕ ಅಧಿಸೂಚಿಸವುದೇನೆಂದರೆ ಮೇಲೆ ತಿಳಿಸಿದ ಬಾಕಿ ಮೊತ್ತ ಜೊತೆಗೆ ಅಪ್ ಟು ಡೇಟ್ ಬಡ್ಡಿ ಹಾಗೂ ಸಾದಿಲ್ವಾರು ವೆಚ್ಚಗಳನ್ನು ಹರಾಜಿನ ದಿನಾಂಕಕ್ಕೆ ಮುಂಚೆ ಪಾವತಿ ಮಾಡಬೇಕು. ವಿಫಲರಾದಲ್ಲಿ ಮೇಲಿನ ಆಸ್ತಿಯನ್ನು ಮಾರಾಟ ಮಾಡಿ ಸಾಲದ ಬಾಕಿಗಾಗಿ ಹೊಂದಿಸಿಕೊಳ್ಳಲಾಗುವುದು. ಇನ್ನೂ ಬಾಕಿ ಉಳಿದ ಪಕ್ಷದಲ್ಲಿ ಅದನ್ನು ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲು ಮಾಡಿಕೊಳ್ಳಲಾಗುವುದು.

ದಿನಾಂಕ: 08.05.2026, ಸ್ಥಳ: ವಿಜಯಪುರ — **ಸಹಿ/- ಅಧಿಕೃತ ಅಧಿಕಾರಿ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್**

CHANGE OF NAME

I, PRAVEEN ANAND KAROSHI Changed my minor Daughter name from **DIVYA PRAVEEN KAROSHI (Old Name) To DIVYA KAROSHI (New Name)** Vide affidavit sworn before S B Desai Advocate & Notary at Belagavi on Dated: 08-05-2026

PUBLIC NOTICE

BE IT KNOWN TO THE PUBLIC AT LARGE, that my client, intends to purchase Agriculture land measuring 01 acre 08 gunthas, out of the land bearing R.S.No.312*/1, total measuring 2 acre 16 gunthas, assessed at Rs.6.24 paise, situated at Bagewadi Village, Bagewadi Circle, Taluka & District: Belagavi, within the Jurisdiction of Sub Registrar Belagavi, and the : same is bounded by East: land of Sapadle, West : Land of Shintre, North: Keri Nala, South: Land of Bagwan, from its owners 1) Shri.Basavaraj Shrishail Naikar, and 2) Malagouda Shrishail Naikar of Kalarkoppa Village, Bagewadi, Tal & Dist: Belagavi.Any Person/s OR Financial Institutions having any right, title, interest claim or objection over the said property may lodge their objections/claims with documentary evidence within 07 (Seven) days to the undersigned. Failing which my client shall complete the transaction of sale and thereafter nobody's claim or objection whatsoever nature will be entertained and it is not binding on my client.

Place: Belagavi.
Date: 08-05-2026.

Shri. B. M Kamati
Advocate
LIG-83, Mahantesh Nagar, Belagavi.
Mob- 9741500688.

ಕನ್ನಡಪ್ರಭ

ಪ್ರತಿ ಭಾನುವಾರ ಪ್ರಚಲಿತ ವಿದ್ಯಮಾನ, ಸಾಹಿತ್ಯ, ಚೆಣ್ಣರಾಟ, ಪ್ರವಾಸ, ಆಹಾರ ವಿಷಯಗಳ ಸಮೃದ್ಧ ಮಾಹಿತಿ ಭಾನುಪ್ರಭ

ART | LITERATURE | CULTURE | FOOD | TRAVEL

ಭಾನುಪ್ರಭ

ನೈಋತ್ಯ ರೈಲ್ವೆ

ಇ-ಹರಾಜು ಕೆಟಲಾಗ್ ಸಂ. ಪಿಎನ್‌ಯು-ಟಾಯ್ಲೆಟ್-ಬಿಜಿಎಂ
ದಿನಾಂಕ : 04-05-2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಗುತ್ತಿಗೆಗಳ ಇ-ಹರಾಜಿಗಾಗಿ ಬಿಡ್ಡುದಾರರನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು : ಬೆಳಗಾವಿ ರೈಲ್ವೆ ನಿಲ್ದಾಣದಲ್ಲಿ ಮೂರು ವರ್ಷಗಳಿಗಾಗಿ ಪಾವತಿಸಿ ಮತ್ತು ಬಳಸಿ – ಸಾಮಾನ್ಯ ಶೌಚಾಲಯದ ಕಾರ್ಯಾಚರಣೆ ಮತ್ತು ನಿರ್ವಹಣೆ.

ಇ-ಹರಾಜಿನ ನಿಗದಿತ ಪ್ರಾರಂಭ :
19-05-2026 ರಂದು 11:00 ಗಂಟೆಗೆ

ವಿವರಗಳಿಗೆ www.ireps.gov.in (e-auction leasing module) ಗೆ ಲಾಗ್ ಆನ್ ಮಾಡಿ

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು
ಹುಬ್ಬಳ್ಳಿ
ಪಿಯುಬಿ/98/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway-SWR | SWRRLY | @SWRAILWAYHQ | @sw_railways

PUBLIC NOTICE

I hereby publish this notice on behalf of and as per the instructions given by my client Shri. Vinay Prakash Pavaskar who has lost original Concent Deed executed by Shri. Appasaheb. Basappa Hukkeri in favour of Shri. Ramesh Annasaheb Gasti, Doc. No. 13820 Dated: 09/03/2012 registered before Sub- registrar, Belagavi lost on 22/04/2026 at Kapileshwar Colony, Belagavi, in respect of Property bearing Plot No 44, totally measuring 1500 Sq. Ft out of R.S. No. 9/5B, Situated at Shindolli Village, Tal & Dist Belagavi and he has also reported same to the Marihal police station wide report copy dated: 07/05/2026. I hereby call upon public at large to return original consent deed mentioned above if anybody found, also call upon Banks, Financial Institutions to submit their claim, if created any charge over said property, in my address mentioned below.

Place: Belgaum
Date: 08/05/2026

P. B. Muchandi
Advocate
Kacheri Galli Machhe,
Belgaum-590001
Mobile: 8147742115

PUBLIC NOTICE

I have issued Public Notice on Behalf of my client Shri Chaitanya S/o Vishwas Kangralkar R/o Saraswati Nagar, Ganeshpur Road, Hinddalaga, Belagavi for the following Reasons.

Shri Chaitanya S/o Vishwas Kangralkar & others are owners of the property claims that the Original Registerd Sale deed Bearing Reg No: 5692/0304 Dated : 14-11-2003 Executed by Shri Bharma Kederi Patil & others in favor of Shri Vishwas Gopalrao Kangralkar with respect to the Schedule Property Original Sale Deed was misplaced/Lost Some where else even though he has deligently searched for the same he could not find it. Further he has given Complaint Dated: 08-05-2026 To the Police Station vide FIR/complaint No. 2192986/2026 ragarding same if any one finds its kindly return it to below mentioned address.

Belagavi
08.05.2026

Sd/- **R. G. HULIKATTI**
ADVOCATE
LIG 200, Mahantesh Nagar, BELAGAVI.
Mobile No. **9448635370**

PUBLIC NOTICE

The Public at large is hereby informed that my client Smt. Jyoti D/o Chandrakant Bongale, R/o H.No.21 Vishnu Galli Kangrali K.H Belagavi, intends to purchase below described Schedule Property from its owner Shri. Abdulshanwas S/0 Mahaboobsab Bagwan, R/o Pant nagar Balekundri, in respect of below mentioned property, however if any persons, legal entity, Banks, etc., having any sort of rights, claims, title, interest or any objections to the said transactions may submit his/its objections to the undersigned along with appropriate documentary and legal proof within 7 days failing which my client will proceed with sale transactions, by presuming that the property is free from all encumbrances. No claims of whatsoever nature will be entertain thereafter.

SCHEDULE OF THE PROPERTY

All the piece and parcel of property i.e., Open Plot bearing Plot No. 192, its **RDPR No.150400301900324678,** and G.P. No.1001/192, totally measuring 111.483000 sq.mtrs, formed by Quality Builders & Developers in R.S.No.35/1 of Honnihal Village, Taluka & District: Belagavi within the limits of Gram Panchayat Modaga. The same is bounded as under:
To the East : Road
To the West Plot No.182
To the North Plot No.191
To the South Plot No.193.

Place: Belagavi
Date: 08-05-2026

Sd/- (Prashant B. Patil)
Advocate
Office: CTS No.4367/3, Chavat Galli, Belagavi. Mob No. 9902520886.

BEFORE THE HON'BLE STATE CONSUMER DISPUTES REDREESAL COMIISSION BENAGALORE SITTING AT: BELAAGAVI
Appeal No.216,217,218,219/2025

Between:
1. Smt Jayashree Karajagi.
...Appellant
: And :
1. Sakshi Nagaraj Katti and others.
...Respondents

NOTICE UNDER ORDER V RULE 20 OF C.P.C.

To,
Respondent Nos. 2, 3, 10 and 11
2. Shree Veershaiv Urban Credit Souhard Sahakari Niyamit, Nidsoshi Branch, Sankeshwar, Tq-Hukkeri, Dist: Belagavi, Represented by its Board of Directors and Secretary/Manager
3. The Chairman Shree Veershalv Urban Credit Souhard Sahakari Niyamit, Nidsoshi Branch, Sankeshwar, Tq-Hukkeri, Dist: Belagavi.
10. The Director, Shri Shivanand Dundappa Karoshi R/o:Nidsoshiwadi, Tq: Hukkeri, Dist: Belagavi.
11. The Director, Shri Sadashiv Ratnappa Karoshi R/o-Subhash Road, Sankeshwar, Tq: Hukkerı, Dist Belagavi.

Whereas the above named appellant has filed top noted appeal against you. You are Respondent No.2,3,10,11 in said case. You are hereby summoned to appear before this Commission in person or through a duly instructed counsel on 11-06-2026 at 2.30.P.M. to put forth your objections and say.

Take notice that, in default of your appearance on the day before mentioned, the case will be heard and decided in your absence.

Given under my hand and seal of the Court, this 8th day of May, 2026.

// BY ORDER OF THE COURT //
Sd/- Sheristedar
Seal
State Consumer Disputes Redressal Commission, Bangalore sitting at Belagavi.
Sd/- Ramappa D. Madar
Bench clerk.
Sd/- (Smt M.V. Patil / Jagtap)
Advocate for Appellant.

ತಿಕೋಟಾದಲ್ಲಿಗ ಕ್ಯಾಲಿಫೋರ್ನಿಯಾದ ದ್ರಾಕ್ಷಿ

ವಿಜಯಪುರದಲ್ಲಿ ಔರಾ-36 ದ್ರಾಕ್ಷಿ ಫುಲ್ ಹವಾ | ಹೆಚ್ಚಿನ ರಾಸಾಯನಿಕ ಬಳಸದೆಯೇ ಅಧಿಕ ಇಳುವರಿ

• **ಶಶಿಕಾಂತ ಮೆಂಡೆಗಾರ**
ಕನ್ನಡಪ್ರಭ ವಾರ್ತೆ ವಿಜಯಪುರ

ಈ ಭೂಮಿಗೆ ನೀವು ಬೊಗಸೆ ನೀರು ಕೊಟ್ಟರೆ ಸಾಕು, ಇದು ಅಮೆರಿಕದ ಕ್ಯಾಲಿಫೋರ್ನಿಯಾವನ್ನೇ ಮೀರಿಸುತ್ತದೆ ಎಂದು ನಡೆದಾಡುವ ದೇವರು, ಶತಮಾನದ ಸಂತ ಸಿದ್ದೇಶ್ವರ ಸ್ವಾಮೀಜಿಗಳು ಹೇಳಿದ್ದ ಮಾತು ಇನ್ನೂ ಎಲ್ಲರ ಕಿವಿಯಲ್ಲಿ ಗುನುಗುತ್ತಿದೆ. ಶ್ರೀಗಳು ಹೇಳಿದ್ದ ಮಾತನ್ನು ಗಂಭೀರವಾಗಿ ಪರಿಗಣಿಸಿದ ಸಚಿವ ಎಂ.ಬಿ.ಪಾಟೀಲರು ಆ ಕಾಯಕಕ್ಕೆ ನೀರೆರೆದರು. ಈ ಹಿನ್ನೆಲೆ ಇದೀಗ ಕ್ಯಾಲಿಫೋರ್ನಿಯಾದಲ್ಲಿ ಬೆಳೆಯುವ ಬಹುಪ್ರಸಿದ್ಧ ಓರಾ-36 ತಳಿಯ ದ್ರಾಕ್ಷಿಯನ್ನೇ ವಿಜಯಪುರ ಜಿಲ್ಲೆಯಲ್ಲಿ ಬೆಳೆದು ರೈತರುಸೈ ಎನಿಸಿಕೊಂಡಿದ್ದಾರೆ. ಕ್ಯಾಲಿಫೋರ್ನಿಯಾದ ಔರಾ-36 ತಳಿಯ ಕಂದು ಬಣ್ಣದ ದ್ರಾಕ್ಷಿ ರೈತರನ್ನು ಇಲ್ಲಿ ಹೆಚ್ಚು ಗಮನ ಸೆಳೆಯುತ್ತಿದೆ.

ಏನಿದು ಔರಾ-36 ದ್ರಾಕ್ಷಿ?: ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಅತಿಹೆಚ್ಚು ಬೆಳೆಯಲಾಗುವ ಈ ಔರಾ-36 ದ್ರಾಕ್ಷಿ ನೋಡಲು ಕಂದು ಬಣ್ಣದ್ದಾಗಿದೆ. ಹೆಚ್ಚು ರಾಸಾಯನಿಕ ಬಳಸದೆಯೇ ಅಧಿಕ ಇಳುವರಿ ಕೊಡುತ್ತದೆ. ನೋಡಲು ಆಕರ್ಷಕವಾಗಿರುವ ಈ ದ್ರಾಕ್ಷಿ ತಿನ್ನಲು ಸಹ ಅಷ್ಟೇ ರುಚಿಕರ. ಇದು ಕ್ಯಾಲಿಫೋರ್ನಿಯಾದ ಗ್ರಾಫಾ ಗ್ಲೋಬಲ್ ಕಂಪನಿಯ ಪೇಟೆಂಟ್‌ನ ವೆರೈಟಿಯಾಗಿದ್ದು, ಇದನ್ನು ನಾಸಿಕನ ಸಹ್ಯಾದ್ರಿ ಫಾರ್ಮರ್ಸ್ (ಎಫ್‌ಪಿಒ) ನವರು ವಿಸ್ತರಣೆ ಮಾಡಲು ಅನುಮತಿ ಪಡೆದಿದ್ದಾರೆ. ಅಲ್ಲಿಂದ ತಿಕೋಟಾಗೆ ಕಾಲಿಟ್ಟಿರುವ ಈ ದ್ರಾಕ್ಷಿ ಇದೀಗ ಜಿಲ್ಲೆಯಲ್ಲಿ ತನ್ನದೆಯಾದ ಬೇಡಿಕೆ ಹೊಂದಿದೆ.

ಇದು ರಾಸಾಯನಿಕವೋ ಅಥವಾ ಸಾವಯವವೋ?: ಮಹಾರಾಷ್ಟ್ರದ ನಾಸಿಕನ ಸಹ್ಯಾದ್ರಿ ಫಾರ್ಮರ್ಸ್‌ನ ವಿಲಾಸರಾವ್ ಶಿಂಧೆ ಅವರ ಸಹಯೋಗದಲ್ಲಿ ಕ್ಯಾಲಿಫೋರ್ನಿಯಾದಲ್ಲಿ ಬೆಳೆಯುವ ಉತ್ಕೃಷ್ಟ ದರ್ಜೆಯ ಔರಾ-36 ತಳಿಯ ದ್ರಾಕ್ಷಿಯನ್ನು ತಿಕೋಟಾದ ಕೃಷ್ಣವೇಣಿ ಎಫ್.ಬಿ.ಒ (ಫಾರ್ಮರ್ಸ್ ಪ್ರೊಡ್ಯೂಜರ್ಸ್ ಆರ್ಗಾನೈಜೇಶನ್) ಇಲ್ಲಿ ಪರಿಚಯಿಸಿದೆ. ಈ ಮೊದಲು ಇಲ್ಲಿ ಬೆಳೆಯಲಾಗುತ್ತಿದ್ದ ಮಾಣಿಕ ಚಮನ್, ಥಾಮ್ಸನ್ ಸೀಡ್‌ಲೆಸ್, ಸೋನಾಕಾ ಈ ದ್ರಾಕ್ಷಿ ತಳಿಗಳಿಗೆ ಹೂ ಬಿಡುವ ಸಮಯದಲ್ಲಿ, ಕಾಯಿ ಗೊಂಚಲು ಹಿಡಿಯುವಾಗ, ದ್ರಾಕ್ಷಿ ವಿಸ್ತೀರ್ಣ ಹಾಗೂ ಬಣ್ಣ ಬರಲೆಂದು ಹಲವು ರಾಸಾಯನಿಕಗಳನ್ನು ಬಳಸಬೇಕಾದ ಅನಿವಾರ್ಯತೆ ಇತ್ತು. ಆದರೆ, ಈ ಔರಾ-36 ತಳಿಗೆ ಇದ್ಯಾವುದರ ಗೊಡವೆಯೇ ಇಲ್ಲ, ಹಿಂಗಾಗಿಯೇ ಇದು ಕೇವಲ ಶೇ.20ರಷ್ಟು ನಿರ್ವಹಣಾ ಖರ್ಚು, ಶೇ.20 ಔಷಧಯಲ್ಲೇ ದ್ರಾಕ್ಷಿ ಕೈಗೆ ಸಿಗುತ್ತದೆ.





ರಾಜ್ಯದಲ್ಲಿ ಮೊದಲ ಬಾರಿಗೆ ಪರಿಚಯ: ಕ್ಯಾಲಿಫೋರ್ನಿಯಾದಿಂದ ನಾಸಿಕ್‌ಗೆ ಬಂದ ಈ ದ್ರಾಕ್ಷಿಯನ್ನು ರಾಜ್ಯದಲ್ಲಿಯೇ ಮೊಟ್ಟ ಮೊದಲ ಬಾರಿಗೆ ತಿಕೋಟಾದ ರೈತರು ಪರಿಚಯಿಸಿದ್ದಾರೆ. ವಿಜಯಪುರ ಜಿಲ್ಲೆಯ ತಿಕೋಟಾದ ರೈತರಾದ ಸಂದೀಪ ಪಾಟೀಲ 1.5 ಎಕರೆ, ಯಮನಪ್ಪ ಕೊಣ್ಣೂರ 1.5 ಎಕರೆ, ರಾಜೇಂದ್ರ ಕುಸೂರ 2 ಎಕರೆ, ಅತಾಲಟ್ಟಿ ಗ್ರಾಮದಲ್ಲಿ ಡಾ.ಸುಭಾಷ ಮುದನೂರ 8 ಎಕರೆ, ತಾಜಪೂರದ ರಾಜು ಹಾಲಳ್ಳಿ 2 ಎಕರೆ, ನಿಡೋಣಿಯ ರಾವುತ ದರ್ಗಾ 9 ಎಕರೆಯಲ್ಲಿ ದ್ರಾಕ್ಷಿ ನಾಟಿ ಮಾಡಿದ್ದಾರೆ. 2025 ಜನವರಿಯಲ್ಲಿ ನಾಟಿ ಮಾಡಿದ್ದು, ಸೆಪ್ಟೆಂಬರ್ ತಿಂಗಳಿನಲ್ಲಿ ನಾಸಿಕನಿಂದ ಔರಾ-36 ತಳಿಯ ಕಡ್ಡಿಗಳನ್ನು ತಂದು ಕಸಿ ಮಾಡಲಾಗಿದೆ. ಈ ಫಸಲು 2027 ಫೆಬ್ರುವರಿಯಲ್ಲಿ ತಿಕೋಟಾದ ರೈತರು ಬೆಳೆದ ದ್ರಾಕ್ಷಿಯ ಮೊದಲ ಫಸಲು ಮಾರುಕಟ್ಟೆಗೆ ಬರಲಿದೆ.

ಇದುರೈತರಿಗೆಹೇಗೆಲಾಭದಾಯಕ: ಸಾಮಾನ್ಯವಾಗಿ ಎಲ್ಲ ದ್ರಾಕ್ಷಿಗಳು ಬೆಳೆಯಲು ಪ್ರತಿ ಎಕರೆಗೆ ಸಾಲಿನಿಂದ ಸಾಲಿಗೆ 10 ಅಡಿ, ಗಿಡದಿಂದ ಗಿಡಕ್ಕೆ 5 ಅಡಿ ಅಂತರದಲ್ಲಿ ನಾಟಿ ಮಾಡುವಂತೆ ಇದನ್ನು ಮಾಡಲಾಗುವುದು. ದ್ರಾಕ್ಷಿ ಬೆಳೆಯಲು ಪ್ರತಿ ಎಕರೆಗೆ ₹6-7 ಲಕ್ಷ ಖರ್ಚಾಗುತ್ತದೆ. ಈ ದ್ರಾಕ್ಷಿಗೆ 7-8 ಲಕ್ಷ ವೆಚ್ಚವಾಗುತ್ತದೆ. ಒಂದು ಎಕರೆಗೆ 12 ರಿಂದ 15 ಟನ್ ಇಳುವರಿ ಬರಲಿದ್ದು, ಇದು ಕೂಡ ಅಷ್ಟೆ ಇಳುವರಿ ಸಿಗಲಿದೆ. ಆದರೆ ಬೇರೆ ದ್ರಾಕ್ಷಿಗಳು ಪ್ರತಿ ಕೆಜಿಗೆ ₹ 40ರಿಂದ 60 ಮಾರಾಟವಾಗುತ್ತವೆ. ಔರಾ-36 ದ್ರಾಕ್ಷಿಯೂ ಈಗಾಗಲೇ ಪ್ರತಿ ಕೆಜಿಗೆ ₹150ರಿಂದ 160 ರಂತೆ ಸಾಂಗ್ಲಿ, ತಾಸಗಾಂವದಲ್ಲಿ ಮಾರಾಟವಾಗಿದ್ದು, ಅಲ್ಲಿಂದ ಯೂರೋಪಿಯನ್ ರಾಷ್ಟ್ರಗಳಿಗೆ ರಫ್ತಾಗುತ್ತದೆ.

> ನಾನು ಬಿಎಸ್‌ಸಿ ತೋಟಗಾರಿಕೆ ಪದವಿ ಮುಗಿಸಿದ ಬಳಿಕ ರೈತರಾದ ನಮ್ಮ ತಂದೆಯ ಜೊತೆಯಲ್ಲಿ ದ್ರಾಕ್ಷಿ ಬೆಳೆ ಬೆಳೆಯುತ್ತಿದ್ದೆ. ಆದರೆ ಸ್ಥಳೀಯ ದ್ರಾಕ್ಷಿ ಬೆಳೆಗಳಲ್ಲಿ ಪ್ರತಿಬಾರಿಯೂ ಒಂದಲ್ಲ ಒಂದು ಸಮಸ್ಯೆಗಳು ಎದುರಾಗುತ್ತಿದ್ದವು. ಇದನ್ನು ತಪ್ಪಿಸಬೇಕು ಎಂದುಕೊಂಡು ನಾನು ಹೊಸ ಹೊಸ ವಿಚಾರ ಹುಡುಕಿದೆ. ಆಗ ನಾನು ನಾಸಿಕನಲ್ಲಿರುವ ಸಹ್ಯಾದ್ರೀ ಫಾರಂಗೆ ಭೇಟಿ ನೀಡಿದಾಗ ಅಲ್ಲಿ 2019ರಿಂದಲೇ ಪ್ರಾಯೋಗಿಕವಾಗಿ ಔರಾ-36 ಬೆಳೆಯಲಾಗುತ್ತಿತ್ತು. ನಂತರದಲ್ಲಿ 2024ರಲ್ಲಿ ರಾಜ್ಯದಲ್ಲಿ ಬೆಳೆಯಲು ಅನುಮತಿ ಸಿಕ್ಕ ಬಳಿಕ ನಾವು ತಂದಿದ್ದೇವೆ.
>
> • **ಸಂದೀಪ ಪಾಟೀಲ** ದ್ರಾಕ್ಷಿ ಬೆಳೆದ ರೈತ.

ಔರಾ-36 ತಳಿಯ ವಿಶೇಷತೆ

ಇದು ನೋಡಲು ಕಂದು ಬಣ್ಣದಿಂದ ಕೂಡಿದ್ದು ಆಕರ್ಷಕವಾಗಿದೆ. ಇದನ್ನು 48 ಡಿಗ್ರಿ ತಾಪಮಾನದಲ್ಲಿಯೂ ಬೆಳೆಯಬಹುದಾಗಿದೆ. ಯಾವುದೇ ತಾಪಮಾನದಲ್ಲೂ ಶೇ.100ರಷ್ಟು ಹೂ ಬಿಡಲಿದೆ. ಉತ್ತಮ ಸೈಜು ಸಿಗಲಿದ್ದು, ಉತ್ತಮ ಬಣ್ಣ ಹೊಂದಿದೆ. ಉತ್ಕೃಷ್ಟವಾಗಿದ್ದು ಬಹಳ ರುಚಿಕರವಾಗಿದೆ. ಈ ಫಸಲು ಬಂದಾಗ ಮಳೆಯಾದರೆ ದ್ರಾಕ್ಷಿ ಹಣ್ಣು ಸೀಳುವುದಿಲ್ಲ, ಬೇರೆ ದ್ರಾಕ್ಷಿಗಳಿಗೆ ಕಾಯಿ ದಪ್ಪ ಮಾಡಲು ರಾಸಾಯನಿಕ ಬಳಸಲಾಗುತ್ತದೆ. ಇದಕ್ಕೆ ಯಾವುದೇ ರಾಸಾಯನಿಕದ ಅಗತ್ಯವಿಲ್ಲ.
